


## ಟಿಪಿಬಳಗದ ತಾರೆಗಳು:

| | | | |
|---|---|---|---|
| ಗಂಗಾಧರ ವಾಲಿ. | ಶ್ರೀನಿವಾಸ ಗುಡಿ. | ಮೃಣಾಲಿನಿ ಗುಡಿ. | ಗಿರೀಶ ಮೆಟಗುಡಮಠ. |
| ಪ್ರಕಾಶ ರಾಜಗೋಳಿ. | ಆನಂದ ಹಿರೇಮಠ. | ಶ್ರೀಕಾಂತ ಎಸ್ ಕೆ. | ಶೋಭಾ ಅಣ್ಣಿಗೇರಿ. |
| ಪುಂಡಲೀಕ ಸತ್ಯನಾಯಕ. | ಆಶಾ ಪಾಟೀಲ. | ರಾಜು ಹಿರೇಗೌಡರ. | ಬಸವರಾಜ ಯಾದವಾಡ. |
| ಆನಂದ ಯಾದವಾಡ. | ಜಗನ್ನಾಥ ಬಿಳಗಿ. | ಅರುಣ ಯಾದವಾಡ. | ತಾಹೀರ ಸನದಿ. |
| ಶ್ರೀಕಾಂತ ಕರಗುದರಿ. | ಗಿರೀಶ ಬೆಳಂದೂರ. | | |

# ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹೀನ ನಿಧಿಯು ಸದಭಿಮಾನದ ಗೂಡು

ರಾಜನ್ಯರಿಪು ಪರಶುರಾಮನಮ್ಮನ ನಾಡು
ಆ ಜಲಧಿಯನೇ ಜಿಗಿದ ಹನುಮನುದಿಸಿದ ನಾಡು
ಓಜೆಯಿಮ್ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಲೆಕ್ಕಿಗಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಿಕಲೆಯಚ್ಚರಿಯ ಕರುಗೋಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜ ವೈವಿದ್ವತ್ತೆಗಳ ಕಾಡು
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈತಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವ ಗದುಗಿನ ವೀರ ನಾರಾಯಣನ ಬೀಡು
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

**– ಹುಯಿಲಗೋಳ ನಾರಾಯಣರಾಯರು**

# ಪರಿವಿಡಿ


1. ಮೊದಲ ಸಂಚಿಕೆಗೆ ಮುನ್ನ ಎರಡು ಮಾತು – ಅರುಣ. ಆರ್. ಯಾದವಾಡ
2. ಕನ್ನಡ ಭಾಷೆಗಾಗಿ ನಡೆದ ಮತ್ತೊಂದು ಅಪೂರ್ವ ಏಕಾಂಗಿ ಚಳುವಳಿ. – ಗಿರೀಶ ಮೆಟಗುಡಮಠ. (ಸ್ವಾಮಿ)
3. ನಿತ್ಯೋತ್ಸವ – (ಸಂಗ್ರಹ) ಶ್ರೀಕಾಂತ್ ಎಸ್. ಕೆ.
4. ನಮ್ಮ ಕಂದ – ಶುಭಶ್ರೀ ಬೆಳಂದೂರ
5. ಕಮೆಂಟ್ ಪಾಸ್ ಮಾಡೋದು – ಪ್ರಕಾಶ. ಸಿ. ರಾಜಗೋಳಿ
6. ರುದ್ರ ರಮಣೀಯ ಗೋಕಾಕ್ ಫಾಲ್ಸ್ – (ಸಂಗ್ರಹ) ಅರುಣ. ಆರ್. ಯಾದವಾಡ
7. ನೋವುಗಳೇ ಹಾಗೆ – ದೇಶಪಾಂಡೆ ಸುಬ್ಬರಾಯ
8. ಐತಿಹಾಸಿಕ ನಗರ ಮಧುರೈ – ಅರುಣ. ಆರ್. ಯಾದವಾಡ
9. ಟಿಪಿಬಳಗ ಚಿನಕುರಳಿ–1 – ಟಿಪಿಬಳಗ
10. ಸರ್ವಜ್ಞನ ವಚನಗಳು – (ಸಂಗ್ರಹ) ಶ್ರೀಕಾಂತ್ ಎಸ್. ಕೆ.
11. ಮನೋಲ್ಲಾಸದ ತಾಣ ದಮ್ಮೂರ ದಿಡಗು – (ಸಂಗ್ರಹ) ಅರುಣ. ಆರ್. ಯಾದವಾಡ
12. ಓ ನನ್ನ ಚೇತನ ಆಗು ನೀ ಅನಿಕೇತನ.. – (ಸಂಗ್ರಹ) ಶ್ರೀಕಾಂತ್ ಎಸ್. ಕೆ.
13. ಟಿಪಿಬಳಗ ಚಿನಕುರಳಿ–2 – ಟಿಪಿಬಳಗ
14. ಜಾಕದ ಪುಳಕಕ್ಕೆ ಹೊಗೇನಕಲ್ – (ಸಂಗ್ರಹ) ಅರುಣ. ಆರ್. ಯಾದವಾಡ
15. ಜ್ಯೂನಿಯರ್ ತಾರೆಯರು ಬಗ್ಗೆ ಒಂದಷ್ಟು.. – ಅರುಣ. ಆರ್. ಯಾದವಾಡ
16. ಮಂಜಾನೆದ್ದು ಕುಂಬಾರಣ್ಣ – (ಸಂಗ್ರಹ) ಶ್ರೀಕಾಂತ್ ಎಸ್. ಕೆ.
17. ಮಾಂಗಲ್ಯಂ ತಂತು ನಾನೇನ..... – ಅರುಣ. ಆರ್. ಯಾದವಾಡ
18. ಬಿ.ವಿ.ಬಿ. ಗೆ ಹಚ್ಚಿದ ಮ್ಯಾಲ ಏನೇನ್ ಕಂಡ್ರಿ..? – ಶ್ರೀನಿವಾಸ ಗುಡಿ
19. ಗಂಗಣ್ಣಾ ವಾಲಿ ಚೆನ್ನೈ ಬಸ್ಸು ಹತ್ತಿದ ಪ್ರಸಂಗ – ಗಂಗಾಧರ ವಾಲಿ.
20. ಬಿಎಸ್ಸೆನ್ನೆಲ್ ಫೋನ್ ಕನೆಕ್ಷನ್ ಪಡೆಯಲು ಮಾಡಿದ ಹರ ಸಾಹಸ – ಆನಂದ ಸಿ. ಹಿರೇಮಠ.
21. ನನ್ನ ವಾಷಿಂಗ್ಟನ್ ಭೇಟಿ.. – ಭಾಗ–1 – ಪ್ರಕಾಶ. ಸಿ. ರಾಜಗೋಳಿ
22. ನನ್ನ ವಾಷಿಂಗ್ಟನ್ ಭೇಟಿ.. – ಭಾಗ–2 – ಪ್ರಕಾಶ. ಸಿ. ರಾಜಗೋಳಿ
23. ನನ್ನವನು – ಶುಭಶ್ರೀ ಬೆಳಂದೂರ
24. ನಿಮ್ಮ ಮಕ್ಕಳಾಗಿ ಶ್ಲೋಕಗಳು – ಅರುಣ. ಆರ್. ಯಾದವಾಡ
25. ಟಿಪಿಬಳಗಕ್ಕೆ ಫ್ರೆಂಡ್‌ಶಿಪ್ಪಾ..? – ಅರುಣ. ಆರ್. ಯಾದವಾಡ
26. ಹಚ್ಚೇವು ಕನ್ನಡದ ದೀಪ – ಡಾ॥ ಡಿ. ಎಸ್. ಕರ್ಕಿ
27. ನಮ್ಮ ಡಚ್ ಕ್ಲೈಂಟ್ ಇಂಡಿಯನ್ ರಿಕ್ಷಾ ಹತ್ತಿದ ಪ್ರಸಂಗ – ಬಸವರಾಜ. ಆರ್. ಯಾದವಾಡ
28. ನಿಮ್ಮ ಮನೆಗೊಂದು ಮುದ್ದಾದ ಹೆಸರು.. – ಅರುಣ. ಆರ್. ಯಾದವಾಡ

## ಮೊದಲ ಸಂಚಿಕೆಗೆ ಮುನ್ನ ಎರಡು ಮಾತು..

ಇತ್ತೀಚೆಗೆ ನಮ್ಮ ಬಳಗದಲ್ಲಿ ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಗಳ ಬಹಳಷ್ಟು ಚರ್ಚೆ ಆಯಿತು. ಆಗಿನಿಂದ ನನಗೆ ನಮ್ಮ ಭಾಷೆಯ ಬಗ್ಗೆ ನಮ್ಮ ಬಳಗದಲ್ಲೇ ಏನಾದರೂ ಮಾಡಬೇಕೆಂಬ ವಿಚಾರ ಬಂತು. ಅದರ ಫಲವೇ ಈ ದೀಪಾವಳಿ ವಿಶೇಷಾಂಕ..! ಇದಕ್ಕೆ ಸ್ಫೂರ್ತಿ ನಮ್ಮಂತೆಯೇ ಇರುವ ಎಸ್.ಡಿ.ಎಮ್. ಇಂಜಿನಿಯರಿಂಗ್ ಕಾಲೇಜ್, ಧಾರವಾಡದ ಸ್ನೇಹಿತರ ಬಳಗವೊಂದು ಪ್ರತಿ ವರ್ಷ ಬಿಡುಗಡೆ ಮಾಡುವ **"ಸ್ಪಂದನ"** ಎಂಬ ದೀಪಾವಳಿ ವಿಶೇಷಾಂಕ. ಅವರು ನಮ್ಮಂತೆಯೇ ಇರುವ ಸುಮಾರು 25 ಜನ ಸ್ನೇಹಿತರಿದ್ದು, ತನ್ನ ನಿಯಮಿತ ಚಟುವಟಿಕೆಗಳಿಂದ ಈ ತಂಡ ಅತ್ಯಂತ ಕ್ರಿಯಾಶೀಲ ಬಳಗವೆನಿಸಿಕೊಂಡಿದೆ.

ಆದರೆ ಈ ವಿಷಯವನ್ನು ಪ್ರಕಟಿಸುವದು ಕೊಂಚ ವಿಳಂಬವಾಯಿತು. ಆದರೆ ನಮ್ಮ ಮಿತ್ರ ಸ್ಯಾಪ್-ರಾಜ ಹೇಳುವಂತೆ ಈ ನಮ್ಮ ಸಾಫ್ಟ್‌ವೇರ್ ಮಂದಿ ಈ ತರಹ 'ಶಾರ್ಟ್ ಡೆಡ್ ಲೈನ್' ಕೊಟ್ಟರೇನೇ ಸರಿಯಾಗಿ ಕೆಲಸ ಮಾಡೋದು ಅಂದುಕೊಂಡಿದ್ದೆನೆ.

ಆದರೂ ಈ ಸಲ ಯಾರಿಗಾದರೂ ಈ ಸಂಚಿಕೆಗೆ ಬರೆಯುವದು ಆಗದೇ ಇದ್ದಲ್ಲಿ ಚಿಂತಿಸುವ ಅಗತ್ಯವಿಲ್ಲ. ನಾವು ಮತ್ತೇ ಹೊಸವರ್ಷಕ್ಕೆ ಇನ್ನೊಂದು ಸಂಚಿಕೆ ಬಿಡುಗಡೆ ಮಾಡುತ್ತಿದ್ದೇವೆ. ಅತ್ಯಂತ ಗಡಿಬಿಡಿಯಲ್ಲಿ ಹೊರ ತಂದಿರುವ ಈ ಸಂಚಿಕೆ ಹೇಗೆ ಮೂಡಿ ಬಂದಿದೆಯೋ ಗೊತ್ತಿಲ್ಲ. ಆದರೆ ಮುಂದಿನ ಸಂಚಿಕೆಯನ್ನು ಮಾತ್ರ ಎಲ್ಲರೂ ಸಹಕಾರದೊಂದಿಗೆ ಸಾಕಷ್ಟು ತಯಾರಿ ನಡೆಸಿ ಅತ್ಯಂತ ಸುಂದರವಾಗಿ ತರಬೇಕೆಂಬ ಯೋಜನೆ ಇದೆ. ಆರಂಭದಲ್ಲಿ ಇದು ತ್ರೈಮಾಸಿಕವಾಗಿರಲಿ ಎಂಬುದು ನನ್ನ ಅಭಿಮತ. ನಿಮ್ಮ ಅಭಿಪ್ರಾಯ ತಿಳಿಸಿ.

ಈ ಸಂಚಿಕೆಯ ಉದ್ದೇಶ ಇಷ್ಟೆ. ನಮ್ಮ ಬಳಗದಲ್ಲಿರುವ ಕ್ರಿಯಾಶೀಲತೆಯನ್ನು ಹೀಗೆಯೆ ಕಾಪಾಡಿಕೊಂಡು ಹೋಗುವದು. ಕನ್ನಡದ ಬಗ್ಗೆ ನಮ್ಮ ನಮ್ಮ ನಡುವೆ ಜಾಗೃತಿಯನ್ನು ಮೂಡಿಸುವದು. (ಯಾರಿಗ್ಗೊತ್ತು..? ಈ ಸಂಚಿಕೆ ನಮ್ಮಂತೆಯೇ ಇರುವ ಅನೇಕ ಬಳಗಗಳಿಗೆ ಮಾದರಿಯಾಗಲೂ ಬಹುದು..!) ಹಾಗೂ ಈ ಸಾಫ್ಟ್‌ವೇರ್, ಈ ಡೆಡ್ ಲೈನ್, ಈ ಲೈಫ್ ಲೈನ್‌ಗಳ ಆಚೆಗೂ ಒಂದು ಬದುಕಿದೆ. ಒಂದು ಜೀವನವಿದೆ ಎಂಬುದನ್ನು ಕಂಡುಕೊಳ್ಳುವದು ಹಾಗೂ ಅದರಲ್ಲಿ ಇರುವ ಸಂತಸವನ್ನು ಹಂಚಿಕೊಳ್ಳುವದು.


ನಿಮ್ಮ ಸಲಹೆ, ಸೂಚನೆ, ಟೀಕೆ-ಟಿಪ್ಪಣಿಗಳಿಗೆ ಮುಕ್ತ ಸ್ವಾಗತವಿದೆ.. ದಯವಿಟ್ಟು ಬರೆಯಿರಿ. ಎಲ್ಲರಿಗೂ ದೀಪಾವಳಿ, ಕರ್ನಾಟಕ ರಾಜ್ಯೋತ್ಸವ ಹಾಗೂ ರಮಜಾನ್ ಹಬ್ಬದ ಹಾರ್ದಿಕ ಶುಭಾಶಯಗಳು.

ಸಿರಿಗನ್ನಡಂ ಗೆಲ್ಗೆ..!

ನಿಮ್ಮ,
ಅರುಣ. ಆರ್ ಯಾದವಾಡ.
ಸಂಪಾದಕ.
31-ಅಕ್ಟೋಬರ್-2005

## ಕನ್ನಡ ಭಾಷೆಗಾಗಿ ನಡೆದ ಮತ್ತೊಂದು ಅಪೂರ್ವ ಏಕಾಂಗಿ ಚಳುವಳಿ.

– ಗಿರೀಶ ಮೆಟಗುಡಮಠ (ಸ್ವಾಮಿ)



ಮಿತ್ರರೇ,

ಇಲ್ಲಿ ನಾನು ಬರೆಯಬೇಕೆಂದ ವಿಷಯ : ಕೆಲವೇ ಕೆಲವು ಸತ್ವಯುತ ಕನ್ನಡಿಗರು ಎಲೆ ಮರೆಯ ಕಾಯಿಗಳಾಗಿ ಹೋರಾಟ ನಡೆಸಿ ಯಶಸ್ಸು ಪಡೆದ ಸತ್ಯ ಸಂಗತಿ.
ಇಲ್ಲಿ ನಾನೀಗ ಪ್ರಸ್ತಾಪಿಸುತ್ತಿರುವ ವಿಷಯ: ಬೆಂಗಳೂರು ಕನ್ನಡ ದೂರದರ್ಶನದ ವ್ಯಾಪ್ತಿಯನ್ನು ಇಡೀ ಕರ್ನಾಟಕಕ್ಕೆ ವಿಸ್ತರಿಸಲು ಪಟ್ಟ ಪರಿಶ್ರಮದ ವರದಿ.

ನಿಮಗೆಲ್ಲಾ ಗೊತ್ತಿರುವಂತೆ ಕರ್ನಾಟಕದಲ್ಲಿ ದೂರದರ್ಶನ ಮರು ಪ್ರಸಾರ ಕೇಂದ್ರಗಳು ಹೆಚ್ಚಾಗಿ ಆರಂಭಗೊಂಡಿದ್ದು 1984ರ ಕಾಲದಲ್ಲಿ. ಆಗ ಈ ಮರು ಪ್ರಸಾರ ಕೇಂದ್ರಗಳು ಕೇವಲ 25 ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು ಅವು ಕೇವಲ ದಿಲ್ಲಿ ದೂರದರ್ಶನದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದವು. ಅಂದರೆ ದಿಲ್ಲಿಯಿಂದ ಏನು ಪ್ರಸಾರವಾಗುತ್ತಿತ್ತೋ ಅದನ್ನೇ ಬಿತ್ತರಿಸುತ್ತಿದ್ದವು. ಈ ಎಲ್ಲಾ ಕಾರ್ಯಕ್ರಮಗಳು ಕೇವಲ ಹಿಂದಿ ಭಾಷೆಯಿಂದ ಕೂಡಿದ್ದು ಬಹುಪಾಲು ಕನ್ನಡಿಗರಿಗೆ ಅರ್ಥವಾಗುತ್ತಿರಲಿಲ್ಲ. ಆದರೆ ಆಗ ಇಡೀ ಕರ್ನಾಟಕದಲ್ಲಿ ಕೇವಲ ಬೆಂಗಳೂರು ದೂರದರ್ಶನ ಕೇಂದ್ರವೊಂದಕ್ಕೆ ಮಾತ್ರ ಸ್ಥಳೀಯವಾಗಿ ಕನ್ನಡ ಕಾರ್ಯಕ್ರಮಗಳನ್ನು ತಯಾರಿಸಿಕೊಂಡು ಪ್ರಸಾರ ಮಾಡುವ ಸಾಮರ್ಥ್ಯವನ್ನು ಹೊಂದಿತ್ತು. ಆದರೆ ಆ ಕೇಂದ್ರದ ವ್ಯಾಪ್ತಿಯೂ ಸಹ ಬಹಳಷ್ಟು ಚಿಕ್ಕದಾದ ಕಾರಣದಿಂದ ಆ ಕನ್ನಡ ಕಾರ್ಯಕ್ರಮಗಳು ಬಹುಪಾಲು ಕನ್ನಡಿಗರನ್ನು ತಲುಪಲೇ ಇಲ್ಲ. ಆದರೆ ನೆರೆ ರಾಜ್ಯಗಳಾದ ಆಂಧ್ರ, ತಮಿಳುನಾಡು ಮತ್ತು ಕೇರಳದಲ್ಲಿ ಸ್ಥಳೀಯ ಭಾಷೆಯ ಕಾರ್ಯಕ್ರಮಗಳು ಇಡೀ ರಾಜ್ಯಕ್ಕೆ ಪ್ರಸಾರವಾಗುತ್ತಿದ್ದವು. ಬಹುಪಾಲು ಗಡಿನಾಡ ಕನ್ನಡಿಗರು ಬೇರೆ ಭಾಷೆಯ ಕಾರ್ಯಕ್ರಮಗಳನ್ನು ಅನಿವಾರ್ಯವಾಗಿ ನೋಡುವಂತಾಗಿತ್ತು. ಇಡೀ ದಕ್ಷಿಣ ಭಾರತದಲ್ಲಿ ಕರ್ನಾಟಕವೊಂದೇ ಸ್ಥಳೀಯ ಭಾಷೆಯ ಪ್ರಸಾರದಿಂದ ವಂಚಿತವಾಗಿತ್ತು. ಇದರ ಬಗ್ಗೆ ನಮ್ಮ ಜನ ಪ್ರತಿನಿಧಿಗಳು ಅದರಲ್ಲೂ ವಿಶೇಷವಾಗಿ ಕರ್ನಾಟಕದ 40 ಜನ ಸಂಸತ್ ಸದಸ್ಯರು (ಅಲಿಬಾಬಾ ಮತ್ತು 40 ಕಳ್ಳರಿದ್ದಂತೆ) ಈ 28 ಜನ ಲೋಕಸಭಾ ಮತ್ತು 12 ಜನ ರಾಜ್ಯಸಭಾ ಸದಸ್ಯರೂ ಈ ವಿಷಯದ ಪೂರಕವಾಗಿ ದನಿ ಎತ್ತಲೇ ಇಲ್ಲ. ಕೇಂದ್ರ ಸರ್ಕಾರದವರಂತೂ ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ ಎನ್ನುವಂತೆ ಈ ಪ್ರಸಾರದ ಮೂಲಕ ಹಿಂದಿ ಭಾಷೆಯ ಹೇರಿಕೆಯನ್ನು ಗುಪ್ತವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ಮುಂದುವರೆಸಿತ್ತು. ಬೇರೆ ರಾಜ್ಯದ ಜನಗಳು ಈ ವಿಷಯದಲ್ಲಿ ಉಗ್ರ ಪ್ರತಿಭಟನೆ ವ್ಯಕ್ತಪಡಿಸಿದ್ದರಿಂದ ಕೇಂದ್ರ ಸರ್ಕಾರದವರು ಅಲ್ಲಿ ಆಯಾ ರಾಜ್ಯಗಳ ರಾಜಧಾನಿಗಳ ದೂರದರ್ಶನ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಿ ಅವು ಆಯಾ ರಾಜ್ಯದ ಎಲ್ಲ ಪ್ರದೇಶಗಳನ್ನು ತಲುಪುವಂತೆ ಮಾಡಿತು. (ಆದರೆ ಕರ್ನಾಟಕವನ್ನು ಹೊರತು ಪಡಿಸಿ). ಸುಮಾರು 1987ರ ವೇಳೆಗೆ ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಬಿಟ್ಟು ಉಳಿದೆಲ್ಲ ರಾಜ್ಯಗಳು ತಮ್ಮ ಸ್ಥಳೀಯ ಭಾಷೆಯ ಪ್ರಸಾರವನ್ನು ಹೊಂದಿದ್ದವು.

ಈ ತಾರತಮ್ಯವನ್ನು ಗಮನಿಸಿದ ಕೆಲವೇ ಕೆಲವು ಸ್ವಾಭಿಮಾನಿ ಕನ್ನಡಿಗರು (ಅವರೆಲ್ಲಾ ಕೇವಲ 4–5 ಜನ ಮಾತ್ರ, ಅದೂ ಕೇವಲ ಒಂದು ಕುಟುಂಬದ ಸದಸ್ಯರು) ಈ ಅನ್ಯಾಯವನ್ನು ಸರಿಪಡಿಸಲೇಬೇಕೆಂಬ ದೃಢ ನಿರ್ಧಾರವನ್ನು ಕೈಗೊಂಡರು. ಅವರೆಲ್ಲ ಹುಬ್ಬಳ್ಳಿಯ ಮರೇಗುದ್ದಿ ಕುಟುಂಬದವರು. ಈ ಕುಟುಂಬದ ಸದಸ್ಯರಾದ ಗೋವಿಂದ (ಭಾರತೀಯ ಸೈನ್ಯದ ಅಧಿಕಾರಿ), ವೆಂಕಟೇಶ, ಪ್ರದೀಪ (ಇಬ್ಬರೂ ಹುಬ್ಬಳ್ಳಿಯಲ್ಲಿ ಚಿನ್ನದ ಆಭರಣ ತಯಾರು ಮಾಡುವವರು) ಹಾಗೂ ಗೋವಿಂದ ಅವರ ಮಕ್ಕಳಾದ ರಾಜೀವ ಮತ್ತು ಮಂಜುನಾಥ ಈ ಐವರೇ ಈ ತಾರತಮ್ಯವನ್ನು ಹೊಗಲಾಡಿಸಿ ಇಡೀ ಕರ್ನಾಟಕಕ್ಕೆ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುವ ವರೆಗೆ ನಿಲ್ಲದ ಹೋರಾಟ ಕೈಗೊಳ್ಳಬೇಕೆಂದು ಸಂಕಲ್ಪ ಮಾಡಿದರು.

ಈ ಉದ್ದೇಶವನ್ನು ಈಡೇರಿಸಲು ಅವರು ಅನುಸರಿಸಿದ್ದು ಪತ್ರ ಚಳುವಳಿ. ಈ ಐದು ಜನರು ತಮ್ಮ ಇತರೆ ಮಿತ್ರರೊಂದಿಗೆ ಸೇರಿ ಹುಬ್ಬಳ್ಳಿ ಮತ್ತು ಧಾರವಾಡದ ಎಲ್ಲಾ ಟಿ.ವ್ಹಿ. ಅಂಗಡಿಗಳಿಗೆ ಭೇಟ್ಟಿ ಕೊಟ್ಟು ಈ ಉದ್ದೇಶವನ್ನು ವಿವರಿಸಿ ಅವರಿಂದ ಹಣ ಇಲ್ಲವೇ ಪತ್ರಗಳನ್ನು ಕಾಣಿಕೆಯಾಗಿ ಪಡೆದರು. ಇದಕ್ಕೆ ಅವರು ನೀಡಿದ ಸಮಜಾಯಿಸಿ ಏನೆಂದರೆ ಕನ್ನಡ ಕಾರ್ಯಕ್ರಮಗಳು ಇಡೀ ಕರ್ನಾಟಕಕ್ಕೆ ಬಿತ್ತರಗೊಂಡರೆ ಹಳ್ಳಿಯಲ್ಲಿರುವ ಅನೇಕ ಜನ ಟಿವಿ ಕೊಳ್ಳಲು ಮುಂದೆ ಬರುತ್ತಾರೆ, ಇದರಿಂದ ನಿಮ್ಮ ವ್ಯಾಪಾರ–ವಹಿವಾಟು ಅತೀ ಹೆಚ್ಚು ಆಗುತ್ತದೆ ಎಂಬ ನಿಜವಾದ ಮತ್ತು ಸಮರ್ಪಕವಾದ ಕಾರಣವನ್ನು ವಿವರಿಸಿ ಅವರಿಂದ ಪತ್ರಗಳನ್ನು (15 ಪೈಸೆಯ ಕಾರ್ಡ್) ಇಲ್ಲವೇ ಹಣವನ್ನು ಪಡೆದುಕೊಂಡರು. ಆದರೆ ದುರ್ದೈವದ ಸಂಗತಿ ಏನೆಂದರೆ ಅನೇಕ ಟಿ.ವ್ಹಿ. ಅಂಗಡಿಗಳ ಮಾಲೀಕರು ಇವರ ವಾದವನ್ನು ಮನ್ನಿಸಲೇ ಇಲ್ಲ. ಕೆಲವೇ ಕೆಲವು ಅಂಗಡಿಯವರು ಅಲ್ಪ ಪ್ರಮಾಣದಲ್ಲಿ ಹಣ ಇಲ್ಲವೇ ಪತ್ರಗಳನ್ನು ನೀಡಿದರು. ಈ ಉದ್ದೇಶಕ್ಕೆ ಸುಮಾರು 5 ಲಕ್ಷ ಕಾರ್ಡ್ ಗಳು ಬೇಕಾಗಿದ್ದವು. ಅಂದರೆ ಸುಮಾರು 75 ಸಾವಿರ ರೂಪಾಯಿಗಳು ಬೇಕಾಗಿತ್ತು. ಸ್ನೇಹಿತರೇ ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಇಷ್ಟು ಹಣ ಹುಬ್ಬಳ್ಳಿಯ ಏಷ್ಟೋ ಸಾರ್ವಜನಿಕ ಗಣೇಶ ಮಂಡಲಿಗಳಲ್ಲಿ ಅನಾಯಾಸವಾಗಿ ಸಂಗ್ರಹವಾಗುತ್ತದೆ. ಆದರೆ ಕನ್ನಡದ ಕೆಲಸವೆಂದರೆ ಮಾತ್ರ ಒಂದು ನಯಾ ಪೈಸೆ ಸಹ ಹುಟ್ಟುವದಿಲ್ಲ. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಹೋರಾಟ ಮಾಡಿದ ಈ ಐವರೂ ಸರಿ ಸುಮಾರಾಗಿ ಒಂದು ವರ್ಷದ ಅವಧಿಯಲ್ಲಿ ಸುಮಾರು 2 ಲಕ್ಷದ ಹತ್ತಿರ ಪತ್ರಗಳನ್ನು ಸಂಗ್ರಹಿಸಿದರು. ಇದರಲ್ಲಿ ಈ ಐವರೂ ವೈಯಕ್ತಿಕವಾಗಿಯೂ ಸಹ ಸಾಕಷ್ಟು ಹಣವನ್ನು ತಮ್ಮ ಕಡೆಯಿಂದ ನೀಡಿದರು ಎಂಬುದು ಗಮನಾರ್ಹ ಅಂಶ. ಕೇವಲ ಪೋಸ್ಟ್ ಕಾರ್ಡ್‌ಗಳಲ್ಲದೇ ಇನ್–ಲ್ಯಾಂಡ್ ಲೆಟರ್ ಮತ್ತು ಲಕೋಟೆಗಳನ್ನೂ ಸಹ ಸಂಗ್ರಹ ಮಾಡಿದರು.

ಇದರ ಜೊತೆಯಲ್ಲೇ ಈ ಎಲ್ಲಾ ಪತ್ರಗಳನ್ನು ವಿವಿಧ ರೀತಿಯ ಕೈಬರಹದಿಂದ ಅಲ್ಲದೇ ವಿವಿಧ ರೀತಿಯ ಒಕ್ಕಣೆಯಿಂದ ಬರೆಯಬೇಕಾಗಿತ್ತು. ಕೇವಲ ಐದು ಜನ ಎಷ್ಟು ರೀತಿಯ ಕೈಬರಹ ಮತ್ತು ಒಕ್ಕಣೆ (ಬರವಣಿಗೆ ಶೈಲಿ) ಹೊಂದಲು ಸಾಧ್ಯ? ಇದಕ್ಕಾಗಿ ಕೆಲವು ಖಾಲಿ–ಪುಕಟ್ ಇರುವ ಹುಬ್ಬಳ್ಳಿಯ ಹುಡುಗರನ್ನು (ಚಾ–ಚುಮ್ಮರಿ ಕೊಡಿಸಿ, ತಿನ್ನಿಸಿ, ಹಣವನ್ನೂ ಸಹ ಕೊಟ್ಟು) ಬಳಸಿಕೊಂಡರು. ಅವರೆಲ್ಲರಿಗೆ ತಮಗೆ ತಿಳಿದ ಹಾಗೆ ಕನ್ನಡ ಟಿ.ವ್ಹಿ. ಬರಲು ಒತ್ತಾಯಿಸಿ ಬರೆಯಿರಿ ಎಂದು ಹೇಳಿದರು. ಈ ಐವರೂ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತನು–ಮನ–ಧನಗಳಿಂದ ಸಂಪೂರ್ಣವಾಗಿ ತೊಡಗಿಸಿಕೊಂಡರು. ಒಟ್ಟಿನಲ್ಲಿ ಈ ಎಲ್ಲಾ ಕೆಲಸ ಒಂದು ವರ್ಷದ ದೊಡ್ಡ ಸಾಫ್ಟವೇರ್ ಪ್ರೊಜೆಕ್ಟ ನಡೆದಂತೆ ನಡೆಯಿತು. ವ್ಯತ್ಯಾಸ ಏನೆಂದರೆ ಅಲ್ಲಿ ನೂರಾರು ಜನರಿದ್ದರೆ ಈ ಪ್ರೊಜೆಕ್ಟನಲ್ಲಿ ಕೇವಲ ಐದೇ ಐದು ಸತ್ವಯುತ ಜನರಿದ್ದರು.

ಇನ್ನು ಈ ಎಲ್ಲಾ ಪತ್ರಗಳನ್ನು ನೂರಾರು ಬೇರೆ ಬೇರೆ ಸ್ಥಳಗಳಿಂದ ಅಲ್ಲದೇ ಬೇರೆ ಬೇರೆ ದಿನಾಂಕಗಳಿಂದ ಪೋಸ್ಟ್ ಮಾಡಬೇಕಾಗಿತ್ತು. ಈ ಎಲ್ಲಾ ಪತ್ರಗಳನ್ನು ಅವರು ಅಂದಿನ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವರಾದ ಶ್ರೀ ಪಿ. ಉಪೇಂದ್ರ ಇವರಿಗೆ ನವ ದೆಹಲಿಗೆ ರವಾನಿಸಬೇಕಾಗಿತ್ತು. ಇದಕ್ಕೂ ಸಹ ಈ ಐವರು ಹರ ಸಾಹಸವನ್ನೇ ಮಾಡಬೇಕಾಯಿತು. ಪ್ರತಿ 2–3 ದಿನಕ್ಕೊಮ್ಮೆ ಸ್ವಲ್ಪ ಸ್ವಲ್ಪ ಪತ್ರಗಳನ್ನು ಅನೇಕ ಊರುಗಳಿಂದ ಪೋಸ್ಟ್ ಮಾಡಬೇಕೆಂದು ನಿರ್ಧರಿಸಿದ ಇವರು ಈ ಕೆಲಸಕ್ಕಾಗಿ ನೂರಾರು ಕೆ.ಎಸ್.ಆರ್.ಟಿ.ಸಿ. ಚಾಲಕರನ್ನು ಮತ್ತು ನಿರ್ವಾಹಕರನ್ನು ಯಥೇಚ್ಛವಾಗಿ ಬಳಸಿಕೊಂಡರು. ಇದರಲ್ಲಿಯೂ ಸಹ ಅನೇಕರಿಗೆ ಈ ಕೆಲಸಕ್ಕಾಗಿ ವಿನಂತಿ, ಅಲ್ಲದೇ ಕೆಲವರಿಗೆ ಹಣವನ್ನೂ ಸಹ ನೀಡಿದರು. ಅಲ್ಲದೇ ಪ್ರತಿ ಗೆಳೆಯ, ಸಂಬಂಧಿ ಅಲ್ಲದೇ ಇತರೇ ಯಾರೇ ಆಗಲಿ ಊರಿಗೆ ಹೋಗುವರಿದ್ದರೆ ಅವರನ್ನು ಕಾಡಿ ಬೇಡಿ ಅವರಿಂದ ಸ್ವಲ್ಪ ಸ್ವಲ್ಪ ಪತ್ರಗಳನ್ನು ಅನೇಕಾನೇಕ ಊರುಗಳಿಂದ ಪೋಸ್ಟ್ ಮಾಡಿಸಿದರು. ಇದರಲ್ಲಿ ಅನೇಕ ಪತ್ರಗಳು ಕರ್ನಾಟಕದ ಹೊರ ಊರುಗಳಿಂದ ಸಹ ರವಾನೆಯಾದವು.

ಈ ಎಲ್ಲ ಪ್ರಯತ್ನಗಳ ಫಲವಾಗಿಯೇ 1990ರ ನವ್ಹೆಂಬರ್ 1 ರಂದು ಅಂದಿನ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವರಾದ ಶ್ರೀ ಪಿ. ಉಪೇಂದ್ರ ಅವರು ಬೆಂಗಳೂರಿನಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ಇಡೀ ಕರ್ನಾಟಕಕ್ಕೆ ವಿಸ್ತರಿಸಿ, ಅವರೂ ಸಹ ಅಚ್ಚ ಕನ್ನಡದಲ್ಲಿ ಮಾತನಾಡಿ ಈ ಭಾಗದ ಲಕ್ಷಾಂತರ ಜನರ ಮನ್ನಣೆಗೆ ನಾವು ಸ್ಪಂದಿಸಿ ಈ ಕಾರ್ಯ ಕೈಗೊಂಡೆವು ಎಂದು ಹೇಳಿದರು.

ಆ ದಿನ ಅವರಿಗೆಲ್ಲ ಆದ ಆನಂದವನ್ನು ಪದಗಳಲ್ಲಿ ವರ್ಣಿಸುವದು ಅಸಾಧ್ಯ. ಎಲ್ಲರೂ ಸಂಪೂರ್ಣರಾಗಿ ಭಾವ ಪರವಶರಾಗಿದ್ದರು. ಕೇಂದ್ರ ಸರ್ಕಾರ ಈ ಪ್ರಯತ್ನವನ್ನು ಎಲ್ಲಾ ಕನ್ನಡಿಗರ ಸಾಮೂಹಿಕ ಹೋರಾಟವೆಂದು ಪ್ರಶಂಸೆ ಮಾಡಿತು, ಆದರೆ ನಿಜವಾಗಿ ಅಲ್ಲಿ ಕೇವಲ ಐದೇ ಐದು ಸತ್ವಯುತ ಕನ್ನಡಿಗರಿದ್ದರು.

ಸ್ನೇಹಿತರೇ ಈ ವಿಷಯವು ನನಗೆ ದಿನಾಂಕ 1990 ನವ್ಹೆಂಬರ್ 1 ರಂದೇ ತಿಳಿಯಿತು. ನಾನೂ ಸಹ ಈ ಕಾರ್ಯದಲ್ಲಿ ಅಳಿಲು ಸೇವೆ ಸಲ್ಲಿಸಲು ಸಾಧ್ಯವಾಗದಕ್ಕೆ ತೀವ್ರ ನಿರಾಶೆಯೂ ಆಯಿತು. ಗೆಳೆಯರೇ ಈ ಕೆಲಸದ ಫಲಶೃತಿ ಈ ಐವರಿಗೆ ಏನು ದೊರೆಯಿತು ಗೊತ್ತಾ? ರಾಜೀವ ಬಿ.ವ್ಹಿ.ಬಿ. (ಬಿ.ಇ. ಮೆಕ್ಯಾನಿಕಲ್) ನಲ್ಲಿ ಸತತವಾಗಿ ಎರಡು ವರ್ಷ ವಾಷ್–ಔಟ್ ಆದರೆ ಮಂಜುನಾಥ ಒಂದು ವರ್ಷ ಡಿಪ್ಲೋಮಾ ಸಿವ್ಹಿಲ್ ವಾಷ್–ಔಟ್ ಆದನು. ವೆಂಕಟೇಶ ಮತ್ತು ಪ್ರದೀಪ ಇಬ್ಬರೂ ತಮ್ಮ ವ್ಯವಹಾರದಲ್ಲಿ ಗಮನ ಹರಿಸಲಾಗದೆ ಸಾಕಷ್ಟು ಹಾನಿ ಮಾಡಿಕೊಂಡರು. ಇದ್ದುದರಲ್ಲಿ ಗೋವಿಂದ ಅವರು ತಮ್ಮ ಮಿಲಿಟರಿ ಕೆಲಸವನ್ನು ನಿಭಾಯಿಸುತ್ತಲೇ ಈ ಕೆಲಸದಲ್ಲಿ ಸಹಕಾರ ನೀಡಿದರು.

ನೋಡಿ ಗೆಳೆಯರೇ ಇಲ್ಲಿದ್ದಾರೆ ನಿಜವಾದ ಕನ್ನಡಿಗರು. ಅನೇಕ ಕರ್ನಾಟಕ ರತ್ನಗಳು (ಪ್ರತಿಷ್ಠಿತರು) ಕನ್ನಡಿಗರೇ ನನ್ನ ಆಸ್ತಿ ಎಂದು ಹೇಳಿ ಆಸ್ತಿ (ಹಣ ಮತ್ತು ಕೀರ್ತಿ) ಪಡೆದುಕೊಂಡರೇ ಹೊರತು ನಿಜವಾದ ಒಂದು ಅರ್ಥಪೂರ್ಣ ಹೋರಾಟವನ್ನು ಮಾಡಲಿಲ್ಲ. ಆದರೆ ಇಂಥ ನಿಜವಾದ ಸತ್ವಪೂರ್ಣ ಕನ್ನಡಿಗರು ಕನ್ನಡಕ್ಕಾಗಿ ತಮ್ಮ ಭವಿಷ್ಯವನ್ನೇ ಬಲಿ ಕೊಟ್ಟರು. ಇಲ್ಲದೇ ಹೋಗಿದಲ್ಲಿ ನಮಗೆ ಕನ್ನಡ ದೂರದರ್ಶನ ಮರೀಚಿಕೆಯಾಗುತಿತ್ತು ಏನೋ? ಇವರಿಗೆ ಪ್ರಶಸ್ತಿ ಕೊಡುವದು ದೂರದ ಮಾತು, ಆದರೆ ಇವರ ಭವಿಷ್ಯವನ್ನು ಇವರೇ ನಂತರ ಒಂದು ಹಂತಕ್ಕೆ ತರಬೇಕಾದರೆ ಸಾಕಷ್ಟು ಹೆಣಗಾಡಬೇಕಾಯಿತು.

ಗೆಳೆಯರೇ ಇದನ್ನು ನಾನು ಇಲ್ಲಿಯವರೆಗೂ ಯಾವ ಟಿ.ಪಿ. ಬಳಗದ ಸದಸ್ಯನ ಜೊತೆಯೂ ಹಂಚಿಕೊಂಡಿಲ್ಲ. ಅಣ್ಣಪ್ಪ ಏನಾದರೂ ಹೊಸ ವಿಷಯ ಬರೆಯಿರಿ ಎಂದು ಕೇಳಿದ್ದಕ್ಕೋ ಏನೋ ಈ ವಿಷಯ ನೆನಪಾಗಿ ಅದನ್ನು ನನಗೆ ತಿಳಿದ ಪದಗಳಲ್ಲಿ ವಿವರಿಸಿದ್ದೇನೆ. ನಿಜವಾಗಿ ಇಲ್ಲಿ ಅಭಿನಂದನಾರ್ಹರು ಆ ಐದು ನಿಜ ಕನ್ನಡಿಗರೇ ಹೊರತು ನನ್ನ ಬರವಣಿಗೆಯಲ್ಲ.

ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ.



**ಟಿಪಿ ಬಳಗ Faq Series:**

**ಬಿಳಗಿ ಅಂದರೇನು..?

– ನನಗ ಈಗ ಸ್ವಲ್ಪ **ಬಿಳಗಿ ಆಗಾಕ ಹತ್ತೇತಿ..! ಆಮ್ಯಾಲ ಹೇಳತೆನಿ.

Sorry yaa.. Please don't mind..!

## ನಿತ್ಯೋತ್ಸವ

ರಚನೆ : ನಿಸಾರ್ ಅಹಮದ್

ಸಂಗ್ರಹ : ಶ್ರೀಕಾಂತ. ಎಸ್. ಕೆ.

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲಿ
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ ತಾಯೆ ನಿತ್ಯೋತ್ಸವ ನಿತ್ಯೋತ್ಸವ ನಿನಗೆ ನಿತ್ಯೋತ್ಸವ

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲಿ
ಗತಸಾಹಸ ಸಾರುತಿರುವ ಶಾಸನಗಳ ಸಾಲಿನಲಿ
ಓಲೆಗರಿಯ ಸಿರಿಗಳಲ್ಲಿ ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯೆ ನಿತ್ಯೋತ್ಸವ ನಿತ್ಯೋತ್ಸವ ನಿನಗೆ ನಿತ್ಯೋತ್ಸವ

ಒಲವೆನ್ನದ ಹಿರಿಮೆಯೆ ಕುಲವೆನ್ನದ ಗರಿಮೆಯೆ
ಸದ್ವಿಕಾಸ ಶೀಲನುಡಿಯ ಲೋಕಾಮೃತ ಸೀಮೆಯೆ
ಈವರ್ಷದ ಈಹರ್ಷದ ಮನ ಉದಾರ ಮಹಿಮೆಯೆ
ನಿತ್ಯೋತ್ಸವ ತಾಯೆ ನಿತ್ಯೋತ್ಸವ ನಿತ್ಯೋತ್ಸವ ನಿನಗೆ ನಿತ್ಯೋತ್ಸವ

## ನಮ್ಮ ಕಂದ

– ಶುಭಶ್ರೀ ಬೆಳಂದೂರ

ಏನು ಅಂದ ಎಷ್ಟು ಚಂದ
ನಮ್ಮ ಪುಟ್ಟ ಕಂದ
ನಗುಮೊಗದ ಅರವಿಂದ
ನಮ್ಮ ಬಾಳ ಮಕರಂದ

ಅವಳಾಡುವ ಆಟ
ಹೂನಗೆಯ ಮಾಟ
ಆ ಮುದ್ದು ನೋಟ
ನಮಗೆ ಹಬ್ಬದೂಟ

ಅವಳು ಕೇಕೆ ಹಾಕಲು
ಕಳೆವುದೆಲ್ಲ ಅಳಲು
ಇವಳೇ ಮುದ್ದು ಮಗಳು
ನಮ್ಮ ಬಾಳ ಮುಗುಳು

ಅವಳು ಅತ್ತು ಕೂಗಲು
ನಮಗೇನೋ ದಿಗಿಲು
ಅವಳು ಮತ್ತೆ ನಗಲು
ಅದೇ ಹರ್ಷದ ಹೊನಲು

ಅವಳಾಡುವ ತೊದಲ್ನುಡಿ
ಬಾಲ ಕಾವ್ಯ ಮುನ್ನುಡಿ
ಇವಳೇ ನಮ್ಮ ಪ್ರೀತಿ ಕುಡಿ
ನಮ್ಮ ಮನೆಯ ಜೀವನಾಡಿ

ಅವಳ ಆಟ ಓಟ ನೋಡಿ
ನಾವು ಹೋಗಿ ಓಡಿ ಓಡಿ
ಮತ್ತೆ ಸೇರಿ ಅವಳ ಜೋಡಿ
ಆಡುವೆವು ಕೂಡಿ ಹಾಡಿ

ಏನು ಅಂದ ಎಷ್ಟು ಚಂದ
ನಮ್ಮ ಪುಟ್ಟ ಕಂದ
ದೇವ ಕೊಟ್ಟ ಬಂಧ
ನಮ್ಮ ಬಾಳ ಆನಂದ

**ಕಮೆಂಟ್ ಪಾಸ್ ಮಾಡೋದು...**

ನಿರಂತರಕ್ಕಾಗಿ ವಿಶೇಷವಾಗಿ ಬರೆದು ಕಳಿಸಿದವರು.
ಪ್ರಕಾಶ ಸಿ. ರಾಜಗೋಳಿ

ಜೀವನದಲ್ಲಿ ಅತ್ಯಂತ ಸರಳ ಮತ್ತು ಸುಲಭವಾದ ಕೆಲಸ ಅಂದ್ರೆ ಈ ಕಮೆಂಟ್ ಪಾಸ್ ಮಾಡೋದು ಅಂತ ಹೇಳಿದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ನಾವೆಲ್ಲ ಜೀವನದಲ್ಲಿ ಒಂದಲ್ಲಾ ಒಂದು ಬಾರಿ, ಯಾರಾದರೂ ಒಬ್ಬರ ಮೇಲೆ, ಯಾವುದೋ ಸಂದರ್ಭದಲ್ಲಿ, ಎನಾದರೊಂದು ಕಮೆಂಟ್ ಪಾಸ್ ಮಾಡಿಯೇ ಇರುತ್ತೇವೆ. ಇಲ್ಲವೆ ಅಂಥಹ ಕೆಲಸದ ಕಾರಣಕರ್ತರೋ ಅಥವಾ ಭಾಗಿದಾರರೋ ಆಗಿರುತ್ತೇವೆ . ನಾವು ಕಮೆಂಟ್ ಪಾಸ್ ಮಾಡುವಾಗ ಅದರ ಅಗತ್ಯತೆ, ಅನಿವಾರ್ಯತೆ, ಸಾಂದರ್ಭಿಕತೆ, ಮುಂದೆ ಆಗಬಹುದಾದ ಪರಿಣಾಮಗಳು ಇತ್ಯಾದಿಗಳ ಬಗ್ಗೆ ಯೋಚಿಸಿರುತ್ತೆವೆಯೇ ಎಂದು ಒಮ್ಮೆ ತಲೆ ಕೆರೆದುಕೊಂಡು ನೋಡಿ ಊಊಊಹೂಹೂಂ ಸಾಧ್ಯವೇ ಇಲ್ಲ! ಹಾಗೇನಾದರೂ ಮಾಡಿದ್ದರೆ ಅದು ತುಂಬ ಕಡಿಮೆ ಸಲ ಎನ್ನುವ ಮಾತನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕು.

ಇದು ಒಂದು ತರಹದ ಸಾಂಕ್ರಾಮಿಕ ಕಾಯಿಲೆ ಇದ್ದಂತೆ ಅಥವ ಬಯಸದೆ ಬಂದ ಖಯಾಲಿ ಅಂತ ಕೂಡ ಹೇಳಬಹುದು. ಕೆಲವರಿರುತ್ತಾರೆ ಅವರಿಗೆ ಇನ್ನೊಬ್ಬರ ಬಗ್ಗೆ ಎನಾದರೂ (ಅದು ಹೊಗಳಿಕೆ ಆಗಿರಬಹುದು ಇಲ್ಲವೇ ತೆಗಳಿಕೆ ಆಗಿರಬಹುದು) ಹೇಳಲಿಲ್ಲವೆಂದರೆ ಊಟವೇ ಜೀರ್ಣವಾಗುವದಿಲ್ಲ.

"ಅಂವ ಭಾಳ ಸುಮಾರ್ ಅದಾನ"
"ಮನುಶ್ಯಾ ಭಾಳ ಚುಲೊ ಅದಾನ್ರಿ"
"ಆಕೀ ಚಾಳಿ ಛುಲೊ ಇಲ್ಲ ಬಿಡ್ರಿ"
"ದೇವರಂಥ ಮನುಷ್ಯ"
"ರಾಕ್ಷಸಿ ಹೆಂಗಸು"
"ಹೊಲಸು ಬುಧ್ಧಿಯವ"
"ನರಿ ಬುಧ್ಧಿಯವ"
"ಅಕಳಂಥ ಮನುಷ್ಯ"
"ಶಾಣ್ಯಾ ಹುಡುಗಿ"
"ದಡ್ಡ ಹುಡುಗ"
"ದಿಲ್ಲದಾರ್ ಗೌಡ"
"ಜಿಪುಣ ಶೆಟ್ಟಿ"
"ಜಿಗುಟ ಗಿರಾಕಿ"
"ಪುಕ್ಕಲ"
"ಧೈರ್ಯವಂತ"
"ಮನೆಹಾಳ/ಳಿ" ಇತ್ಯಾದಿ ಇತ್ಯಾದಿ.

ಇವನ್ನೆಲ್ಲ ಒರೆಗೆ ಹಚ್ಚಿ ವ್ಯಾಲಿಡೇಟ್ ಮಾಡಲು ನಮ್ಮ ಬಳಿ ಯಾವುದೇ ಮಾನದಂಡಗಳು ಇಲ್ಲದೇ ಇರುವದರಿಂದ ಮತ್ತು ಇಂತಹ ಕಮೆಂಟುಗಳನ್ನು ಒಬ್ಬೊಬ್ಬರು ಒಂದೊಂದು ರೀತಿ ಅರ್ಥೈಸಿಕೊಳ್ಳಬಹುದಾಗಿರುವದರಿಂದ ಯಾರ್ಯಾರೋ ಯಾರ್ಯಾರದೋ ಬಗ್ಗೆ ಯಾವ್ಯಾವಾಗಲೋ ಏನೇನೋ ಹೇಳಿ ತಪ್ಪಿಸಿಕೊಳ್ಳಬಹುದು. ಸಿಕ್ಕಿಬಿದ್ದರೆ ನಮ್ಮ ಅಪ್ಪಟ ರಾಜಕಾರಣಿಗಳಂತೆ "ನಾನು ಹಾಗೆ ಹೇಳಲೇ ಇಲ್ಲ" ಅಂದರೆ ಮಾತೇ ಮುಗಿದು ಹೋಗುತ್ತದೆ.

ಆದ್ದರಿಂದಲೆ ನಾನು ಮೊದಲೇ ಹೇಳಿದ್ದು ಈ ಕಮೆಂಟ್ ಪಾಸ್ ಮಾಡುವ ಕೆಲಸ ತುಂಬಾ ಈಜಿ ಮತ್ತು ಯಾವುದೇ ತೊಂದರೆ ಇಲ್ಲದ ಕೆಲಸ. ಹಾಗೆಂದ ಮಾತ್ರಕ್ಕೆ ನಾವೆಲ್ಲಾ ಇದನ್ನು ಮಾಡಲೇಬೇಕೇನು ಎನ್ನುವ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ನಮಗಂಟಿದ ಕೆಟ್ಟ ಚಾಳಿಯಿಂದಾಗಿ ನಾವು ಇದನ್ನು ಮಾಡುತ್ತಲೇ ಇರುತ್ತೇವೆ. ಸುಮ್ಮನೆ ಯೋಚಿಸಿ ನೋಡಿ ಇದರ ಅಗತ್ಯತೆ ಇದೆಯೇ?
ಉತ್ತರ ಹೌದು ಅಥವಾ ಇಲ್ಲ.

ಯಾಕೆ ಹೀಗೆ ಅಂದರೆ ನಾವು ಯಾವುದೊ ವಿಷಯದ ಬಗ್ಗೆ ಅಥವಾ ಯಾವುದೋ ಸಂದರ್ಭದ ಬಗ್ಗೆ ಅಥವಾ ಯಾರದೋ ವ್ಯಕ್ತಿಗಳ ಬಗ್ಗೆ ಕಮೆಂಟ್ ಪಾಸ್ ಮಾಡಿದರೆ ಒಂದು ಕಷ್ಟ ಇಲ್ಲವಾದರೆ ಇನ್ನೊಂದು ಕಷ್ಟ.
ಹಾಗೆಂದು ಹೋಗಲಿ ಬಿಡಿ ಯಾರಿಗೇನು ನಷ್ಟ. ಎಂದು ಸುಮ್ಮನಾದರೂ ಇರುತ್ತೇವೆಯಾ..! ಊಹೂಂ ಅದನ್ನೂ ಮಾಡುವದಿಲ್ಲ. ಯಾಕೆಂದರೆ ಒಪ್ಪೊ ತಪ್ಪೊ ನಾವೆಲ್ಲಾ ಕಮೆಂಟ್ ಪಾಸ್ ಮಾಡಲೇಬೇಕು ಎನ್ನುತ್ತದೆ ನಮ್ಮ ಕಳ್ಳ ಮನಸ್ಸು. ಇದು ಎಷ್ಟೊಂದು ಸ್ಪಷ್ಟ. ಅಲ್ಲವೆ?

ಕೆಲ ಉದಾಹರಣೆಗಳನ್ನೇ ತೆಗೆದುಕೊಳ್ಳುವದಾದರೆ.......

ಭಾರತದ ಮೊದಲ ಮಹಿಳಾ ಪ್ರಧಾನಿ ಇಂದಿರಾ ಗಾಂಧಿ ಕಾಂಗ್ರೆಸ್ಸಿನವರಿಗೆ ಬಡವರ ಬಂಧು, ಅಮೃತಧಾರಿಣಿ ಸಾಕ್ಷಾತ್ ದೇವತೆಯಾಗಿ ಕಂಡುಬಂದರೆ ಇನ್ನುಳಿದವರಿಗೆ ಘಾಟಿ ಹೆಂಗಸಾಗಿ, ಹೆಣ್ಣು ಹಿಟ್ಲರ್ ಆಗಿ ಕಾಣಿಸುತ್ತಾರೆ. ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದ ರಾಮಕೃಷ್ಣ ಹೆಗಡೆ ಜನತಾದಳೀಯರಿಗೆ ಬುದ್ಧಿಜೀವಿಯಂತೆ ಕಂಡುಬಂದರೆ ಬಂ ಗುಂ ಇತ್ಯಾದಿಗಳಿಗೆ ನರಿಬುದ್ಧಿಯ ನಯವಂಚಕನಾಗಿ ಕಂಡುಬರುತ್ತಾರೆ. ವಿಶ್ವದ ಸಾಫ್ಟವೇರ್ ಇತಿಹಾಸದಲ್ಲಿ ಬೆಂಗಳೂರಿನ ಹೆಸರಿಗೆ ಶಾಶ್ವತ ಸ್ಥಾನ ತಂದು ಕೊಟ್ಟ ನಾರಾಯಣ ಮೂರ್ತಿ ಈ ಕ್ಷೇತ್ರದಲ್ಲಿರುವವರಿಗೆ ಆಪದ್ಬಾಂಧವನಾಗಿ ಕಂಡು ಬಂದರೆ ದೇವೆಗೌಡರಂತಹ ಫುಲ್ ಟೈಮ್ ರಾಜಕಾರಣಿಗಳಿಗೆ ರಾಜಕಾರಣಿಗಳಿಗೆ ನೆಲಗಳ್ಳರಂತೆ ತೋರುತ್ತಾರೆ.

ಭಾರತದ ಬಹುಸಂಖ್ಯಾತ ಹಿಂದೂಗಳಿಗೆ ರಾಮಮಂದಿರ ನಿರ್ಮಿಸುವ ಧ್ರುವತಾರೆಯಂತೆ ಲಾಲಕೃಷ್ಣ ಅಡ್ವಾಣಿ ಮಿಂಚಿದರೆ ಜೆಹಾದಿಗಳಿಗೆ ಆತ ಬಾಬ್ರಿ ಮಸೀದಿ ಕೆಡವಿದ ಧೂರ್ತನಂತೆ ಕಾಣಿಸುತ್ತಾರೆ.
ಅಮೆರಿಕನ್ನರಿಗೆ ತಮ್ಮನ್ನು ಜಗತ್ತಿನ ಸಕಲ ಭಯೋತ್ಪಾದಕರಿಂದ ಪಾರು ಮಾಡುವ ದೀನಬಂಧುವಾಗಿ ಜಾರ್ಜ್ ಬುಷ್ ತೋರಿದರೆ ಅದೇ ವ್ಯಕ್ತಿ ಜೆಹಾದಿಗಳನ್ನು ಬೆಂಬಲಿಸುವವರಿಗೆ ರಕ್ತಪಿಪಾಸು, ಅಮಾಯಕರ ನೆತ್ತರು ಕುಡಿಯುವ ದುಷ್ಟನಂತೆ ಕಾಣಿಸುತ್ತಾನೆ.

ಜನರಲ್ ಮುಷರಫ್ ನಮಗೆಲ್ಲಾ ಭಾರತೀಯರಿಗೆ ಕಾರ್ಗಿಲ್ ಕದನದ ರೂವಾರಿ, ಕುಟಿಲ ವ್ಯಕ್ತಿಯಾಗಿ ಕಂಡುಬಂದರೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ ಜನರಿಗೆ ಅದೇ ಮುಷರಫ್ ಅವರಿಗೆ ಸ್ವಾತಂತ್ರ್ಯ ತಂದುಕೊಡುವ ಮಹಾತ್ಮನಾಗಿ ಕಾಣಿಸಬಹುದು ಅಲ್ಲವೆ? ಯಾಕೆ ಗೊತ್ತೆ?

ನಾವೆಲ್ಲ ಯಾವುದೇ ವ್ಯಕ್ತಿಯನ್ನು, ಪ್ರಸಂಗವನ್ನು ನಮ್ಮದೇ ಆದ ರೀತಿಯಲ್ಲಿ ಅರ್ಥೈಸುತ್ತೇವೆ ಮತ್ತು ನಮ್ಮ ಮನಸ್ಸಿಗೆ ತಿಳಿದ ಹಾಗೆ ಕಮೆಂಟ್ ಕೂಡ ಫ಼ಾರ್ಮ್ ಮಾಡಿಕೊಳ್ಳುತ್ತೇವೆ. ಇಷ್ಟೇ ಆಗಿದ್ದಿದ್ದರೆ ಹಾಳಾಗಿ ಹೋಗಲಿ ಎಂದು ಸುಮ್ಮನಿರಬಹುದಿತ್ತು. ಆದರೆ ನಾವದನ್ನು ಪಾಸ್ ಮಾಡುತ್ತೇವೆ!!!

ಕೇಳಲೊಂದು ಕಿವಿಯಿದ್ದರೆ ಹೇಳುವ ಬಾಯಿಗಳಿಗೆ ಏನು ಕೊರತೆ ಈ ಜಗತ್ತಿನಲ್ಲಿ!!!!
ಯಾಕಂದ್ರೆ ಕಮೆಂಟ್ ಪಾಸ್ ಮಾಡೋದು....ಜೀವನದಲ್ಲಿ ಅತ್ಯಂತ ಸರಳ ಮತ್ತು ಸುಲಭವಾದ ಕೆಲಸ.

ನೀವೇನಂತೀರಿ?

## ರುದ್ರ ರಮಣೀಯ ಗೋಕಾಕ ಫ್ಲಾಲ್ಸ್

– ಅರುಣ ಆರ್. ಯಾದವಾಡ.



ನಿಸರ್ಗದ ಸೌಂದರ್ಯವನ್ನು ಸವಿಯ ಬಯಸುವ ಉಪಾಸಕರಿಗೆ ನಮ್ಮ ಬೆಳಗಾವಿ ಜಿಲ್ಹೆಯ ಕೊಡುಗೆ ಏನೂ ಕಡಿಮೆ ಇಲ್ಲ. ಇಂಥ ಕೆಲವೇ ಕೆಲವು ಸುಂದರ ತಾಣಗಳಲ್ಲಿ ಗೋಕಾಕ ಫ್ಲಾಲ್ಸ್ ಕೂಡ ಒಂದು.

ಗೋಕಾಕ ನಗರದಿಂದ ಸುಮಾರು 6 ಕೀ.ಮಿ. ದೂರದಲ್ಲಿ ಧೂಪದಾಳ ಎಂಬ ಗ್ರಾಮದ ಹತ್ತಿರ, ಸುಮಾರು 52 ಮೀಟರ್ ಎತ್ತರದಿಂದ ಧುಮ್ಮಿಕ್ಕುವ ಘಟಪ್ರಭೆ ಒಂದು ಸುಂದರ ಅದ್ಭುತ ಜಲಪಾತವನ್ನು ಸೃಷ್ಟಿಸಿದ್ದಾಳೆ. ಮಳೆಗಾಲದಲ್ಲಿ ಘಟಪ್ರಭೆ ಮೈದುಂಬಿ ಹರಿಯುವಾಗ ಅವಳ ರೂಪ, ಅಬ್ಬರ.. ಭೋರ್ಗರೆಯುತ್ತ ವೇಗದಿಂದ ನುಗ್ಗಿ ಮುಂದೆ ಸಾಗುವ ಆ ಮನಮೋಹಕ ದೃಶ್ಯಾವಳಿಯನ್ನು ನೋಡುವದೇ ಕಣ್ಣಿಗೆ ಒಂದು ಹಬ್ಬ. ಇಲ್ಲಿಗೆ ಹೋಗಬೇಕೆಂದರೆ, ನೇರವಾಗಿ ಗೋಕಾಕ್ ಫ್ಲಾಲ್ಸ್‌ನ ಮೂಲಕ ಹೋಗುವ ಬದಲು, ಸ್ವಲ್ಪ ಕೆಳಮಟ್ಟದಲ್ಲಿರುವ ಧೂಪದಾಳ ಗ್ರಾಮದ ಮೂಲಕ ನದಿಯ ಆ ಬದಿಗೆ ಹತ್ತಿ, ಜಲಪಾತದತ್ತ ಮುನ್ನಡೆಯಿರಿ. ನೀವು ಜಲಪಾತವನ್ನು ತಲುಪುವ ಮೊದಲೆ ಸ್ವಲ್ಪ ದೂರದಲ್ಲೇ ಅದರ ಮೊರೆತ ಮೆಲ್ಲಗೆ ಕೇಳಿಸುತ್ತ ಸಮೀಪ ಹೋದಂತೆಲ್ಲ ತಾರಕಕ್ಕೆರುತ್ತದೆ. 52 ಮೀ ಎತ್ತರ ಹಾಗು 177 ಮೀ ಅಗಲ ಹರಡಿಕೊಂಡಿರುವ ಈ ಜಲರಾಶಿ, ನೀರಿನ ಬಣ್ಣ ಹಾಗು ಆಳತೆಗಳನ್ನು ಬಿಟ್ಟರೆ ಸ್ವಲ್ಪ ಮಟ್ಟಿಗೆ ವಿಶ್ವ ಪ್ರಸಿದ್ಧ ನಯಾಗರಾ ಜಲಪಾತವನ್ನು ಹೋಲುತ್ತದೆ.

ಆಶ್ಚರ್ಯಕರ ಸಂಗತಿಯೆಂದರೆ, ನಮ್ಮ ದೇಶದಲ್ಲಿ ಪ್ರಪ್ರಥಮವಾಗಿ ವಿದ್ಯುತ್ ಉತ್ಪಾದನೆ ಇಲ್ಲಿ 1887ರಲ್ಲಿ ಆಗಿದೆ. ಈ ವಿದ್ಯುತ್ ಉತ್ಪಾದನಾ ಕೇಂದ್ರ ಜಲಪಾತದ ತಳದಲ್ಲಿ ಇದ್ದು ಅಲ್ಲಿಗೆ ಹೋಗುವ ದಾರಿ ಗಟ್ಟಿ ಗುಂಡಿಗೆಯವರಿಗೆ ಮಾತ್ರ..! ನದಿಯ ಕಲ್ಲು ಬಂಡೆಗಳ ದಡದಲ್ಲಿ ನಡೆಯುತ್ತಿದ್ದರೆ ನಿಮಗೆ 6ನೇ ಶತಮಾನದ ಚಾಲುಕ್ಯರ ಕಾಲದ ಸ್ಮಾರಕಗಳು, ಷಣ್ಮುಖ,

ಮಹಾಲಿಂಗೇಶ್ವರ, ಬಸವಣ್ಣ ಹಾಗು ದುರ್ಗಾ ದೇವಸ್ಥಾನಗಳು ನೋಡಸಿಗುತ್ತವೆ.

ಮತ್ತೆ ಈ ಬದಿಗೆ ವಾಪಸಾಗಲು, ಜಲಪಾತದ ನೆತ್ತಿಯ ಮೇಲೆ ಒಂದು ತೂಗು ಸೇತುವೆ ಇದೆ. ಇದರ ಮಧ್ಯ ನಿಂತು ನೋಡಿದರೆ ಅದೊಂದು ರೋಮಾಂಚಕ ಅನುಭವ..! ಜಲಪಾತ ಪೂರ್ತಿ ತುಂಬಿ ಹರಿಯುವಾಗ ಅದರ ರಭಸಕ್ಕೆ ಈ ಸೇತುವೆ ಜೋರಾಗಿ ಹೊಯ್ದಾಡುತ್ತಿರುತ್ತದೆ. ಆಗ ಈ ಸೇತುವೆಯನ್ನು ದಾಟುವದೆಂದರೆ ಮತ್ತೇ ಮರುಜನ್ಮ ಕಂಡಂತೆಯೇ ಸೈ..! ಈ ವರ್ಷ 2005ರಲ್ಲಿ ಈ ಪ್ರದೇಶದಲ್ಲಿ ಭಾರೀ ಮಳೆಯಾಗಿ ಜನರಿಗೆ ಈ ರೀತಿ ಅನುಭವಗಳು ಆಗಿವೆಯೆಂದು ನಮ್ಮ ಸ್ಯಾಪ್-ರಾಜಾ ಪ್ರಕಾಶ ಅವರ ಅತ್ತೆಯವರಾದ ಶ್ರೀಮತಿ. ಎಮ್.ಬಿ. ರಾಜಗೋಳಿ ಅವರು ಆಗಲೇ ತಿಳಿಸಿದ್ದಾರೆ.

ಆದರೆ ಖೇದದ ಸಂಗತಿಯೆಂದರೆ ಈ ಸ್ಥಳವನ್ನು ಒಂದು ಒಳ್ಳೆಯ ಪ್ರವಾಸಿ ತಾಣವನ್ನಾಗಿ ಸರಕಾರ ಅಭಿವೃದ್ಧಿ ಪಡಿಸಿಲ್ಲ. ಆ ದಿಕ್ಕಿನಲ್ಲಿ ಗಮನ ಹರಿಸುವ ಅಗತ್ಯ ಇದೆ. ಗೋಕಾಕ್ ಫಾಲ್ಸ್ ಬೆಳಗಾವಿಯಿಂದ 60 ಕೀ.ಮಿ. ಹಾಗೂ ಹುಬ್ಬಳ್ಳಿಯಿಂದ ಸುಮಾರು 120 ಕೀ.ಮಿ ದೂರದಲ್ಲಿದೆ. ಸಾಕಷ್ಟು ಬಸ್ಸಿನ ಅನೂಕೂಲವಿದ್ದು, ವಸತಿಗೆ ಗೋಕಾಕ ನಗರದಲ್ಲಿ ಒಳ್ಳೆಯ ಲಾಡ್ಜ್‌ಗಳಿವೆ. ಅದರೆ ಖಾಸಗಿ ವಾಹನಗಳಲ್ಲಿ ಬೆಳಿಗ್ಗೆ ಹೋಗಿ, ಅಲ್ಲಿ ಪೂರ್ತಿ ದಿನ ಕಳೆದು ಸಂಜೆ ವಾಪಸಾಗುವದು ಒಳ್ಳೆಯ ಆಯ್ಕೆ.



**ಟಿಪಿ ಬಳಗ Faq Series:**

****ರಾಜಗೋಳಿ** ಅಂದರೇನು..?

– ಅಷ್ಟು ಗೊತ್ತಿಲ್ಲೇನು..? ಅದರ ಅರ್ಥ **'ನೆನಪು ಹಿಡಿ ತೀರಿತು..!'** ಅಂತಾ.



**ನೋವುಗಳೇ ಹಾಗೆ..**

– ಶ್ರೀ ದೇಶಪಾಂಡೆ ಸುಬ್ಬರಾಯ, ಕುಸುಮನಗರ, ಧಾರವಾಡ –8
(ಮೃಣಾಲಿನಿ ವೈನಿ ಅವರ ತಂದೆಯವರು)

ನೋವುಗಳೇ ಹಾಗೆ;
ಬಳ್ಳಿಗಳ ಹಾಗೆ, ಕೆಲವರ ಪಾಲಿಗೆ;
ಎದೆಯ ಅಂಗಳದಲ್ಲೊಂದು ಕಮಾನು ಕಟ್ಟಿಯೋ
ಕೋಲು ನೆಟ್ಟೋ ಶಿಸ್ತಾಗಿ ಬೆಳೆಸಿರುತ್ತಾರೆ;
ಅರಳಿಸುತ್ತಾರೆ, ನೂರೊಂದು ನೋವು ಹೂವುಗಳ
ಕಣ್ಣು ತುಂಬುವಂತೆ.

ಇನ್ನೂ ಕೆಲವರ ಪಾಲಿಗೆ
ನೋವು ನಾನಾ ಬಗೆಯ ಕ್ರೊಟನ್‌ಗಳಿದ್ದ ಹಾಗೆ:
ಅಂಗಳದ ಮೂಲೆ ಮೂಲೆಯಲ್ಲೂ ಸಾಲು ಸಾಲಾಗಿ
ಹಲವಾರು ಬಣ್ಣಗಳಲ್ಲಿ
ನೊಡುವವರ ಕಣ್ಣುಗಳಲ್ಲಿ
ಖುಶಿ ಉಕ್ಕುವಂತೆ ಬೆಳೆಸಿರುತ್ತಾರೆ.

ಇವರ ಬಗೆ ಹೀಗಾದರೆ;
ಇನ್ನು ಹಲವರ ಪಾಲಿಗೆ
ನೋವಿನ ನಂಟು ಮನಿ ಪ್ಲಾಂಟಿನಂತೆ.
ಹೊಳೆ ಹೊಳೆಯುವ ಹಿತ್ತಳೆಯ ಭಾಂಡಗಳಲ್ಲೊ
ವ್ಹಿಸ್ಕಿ ಬ್ರಾಂದಿಗಳ ಸುಂದರ ಶೀಶೆಗಳಲ್ಲೊ
ಕೂಡಿಸಿ ದಿವಾನ್‌ಖಾನೆಯ ಸೊಬಗಿಗೆ
ಸೊಗಡಾಗಿಸುತ್ತಾರೆ
ಇವರು.

ಇನ್ನೂ ಇದ್ದಾರೆ ಕೆಲವರು;
ನೋವಿನಳವಡಿಕೆಯಲ್ಲಿ ಸದಾ ಸಿದ್ಧರು,
ಸುಪ್ರಸಿದ್ಧರು.
ಈ ಪ್ರಚಂಡರ ಪಾಲಿಗೆ
ನೋವುಗಳೆಂದರೆ ನಡೆದಾಡುವ
ಸಸ್ಯೋದ್ಯಾನಗಳಿದ್ದಂತೆ;
ಹೀಗಾಗಿ;

ಚಂದಾ ಚಂದದ ಕುಂಡಗಳಲ್ಲಿ
ಹತ್ತು ಹಲವಾರು ಡಿಸೈನುಗಳಲ್ಲಿ
ಸಕಲ ದೈತ್ಯ ನೋವುಗಳ
ಬೊನ್ಸಾಯಿಕ್ ಜಗತ್ತನ್ನೇ ಸೃಷ್ಟಿಸಿರುತ್ತಾರೆ
ಇವರು; ಅದೂ ಶಾಸ್ತ್ರೋಕ್ತವಾಗಿ..!

ಎಲ್ಲೆಂದರಲ್ಲಿ, ಯಾವುದೆಂದರದನ್ನು
ಆರ್ಡರ್ ಕೊಟ್ಟಷ್ಟು ಕಳಿಸಿಬಿಟ್ಟು
ನೋವಿನ ಧಿಡೀರ್ ಉದ್ಯಾನವನ್ನೇ ಎಬ್ಬಿಸಿ
ಬಿಡುತ್ತಾರಿವರು.

ಇಂಥಾ ಭರ್ಜರಿ ಭವ್ಯ ಜಗದಲ್ಲಿ
ನನ್ನಂಥ ಬಡಪಾಯಿ
ಏನನ್ನು ತಾನೇ ತೊರಿಸಬಲ್ಲ!
ಯಾವುದನ್ನು ತಾನೇ ಮೀರಿಸಬಲ್ಲ!

ಏಕೆಂದರೆ;
ನನ್ನ ನೋವೆಂದರೆ,
ಎದೆಯ ಅಂಗಳವಂತೂ ಹೋಗಲಿ
ಹಿತ್ತಲಿನ ಯಾವೊದೊ ಕತ್ತಲು ಮೂಲೆಯಲ್ಲಿ
ಬೆಳೆದ
ಒಂದು ಪುಟ್ಟದಾದ ಮುಟ್ಟಲು ಮುರಿಕೆ ಇದ್ದಂತೆ;
ಬೆಚ್ಚನೆಯ ಸ್ಪರ್ಶ ಸ್ವಲ್ಪ ತಟ್ಟಿದರೂ ಸಾಕು
ಫಕ್ಕನೆ ಮುಚ್ಚಿಕೊಂಡು
ಸಂಕೋಚದ ಸಂಕಟವಾಗಿ ಬಿಡುತ್ತದೆ
ಇದು.

ಇಂಥಾ ನೋವಿನೊಳಗುದಿಯನ್ನು
ಹೇಗೆ ತಾನೆ ಬೆಳಕಿಗೆ ಹಿಡಿದೇನು
ನಾನು!

**ಐತಿಹಾಸಿಕ ನಗರ ಮಧುರೈ** – ಅರುಣ ಆರ್. ಯಾದವಾಡ.



ಮಧುರೈ ತಮಿಳುನಾಡಿನ ಎರಡನೇ ಅತಿ ದೊಡ್ಡ ಮಹಾನಗರವಾಗಿದ್ದು ಸುಮಾರು 2600 ವರ್ಷಗಳ ಇತಿಹಾಸವನ್ನು ಹೊಂದಿದೆ. ಇದನ್ನು ಪೂರ್ವದ ಅಥೆನ್ಸ್ ಅಂತಲೂ ಕರೆಯುತ್ತಾರೆ. ಬೆಂಗಳೂರಿನಿಂದ ಸುಮಾರು 450 ಕಿ.ಮೀ. ದೂರದಲ್ಲಿರುವ ಈ ನಗರ ಪ್ರಮುಖ ಜಿಲ್ಲಾ ಕೇಂದ್ರವಾಗಿದ್ದು ಪ್ರಕೃತಿದತ್ತ ಗಿಡಮೂಲಿಕೆಗಳು, ತಾಂತ್ರಿಕ ವಿದ್ಯಾಲಯಗಳು ಹಾಗು ಬಟ್ಟೆ ಉದ್ಯಮಗಳಿಂದ ಸುತ್ತುವರಿಯಲ್ಪಟ್ಟಿದೆ. ಕಲೆ, ಸಂಸ್ಕೃತಿ ಹಾಗೂ ತನ್ನ ಐತಿಹಾಸಿಕ ಹಿನ್ನೆಲೆಗೆ ಹೆಸರಾಗಿರುವ ಈ ನಗರದಲ್ಲಿ ಶತ ಶತಮಾನಗಳ ಹಿಂದೆ ಸಾಕ್ಷಾತ್ ಪರಶಿವನೇ ತಿರುವಲ್ಲೈಯಡರ್ ಎಂಬ ವ್ರುತವನ್ನು ನಡೆಸಿದನೆಂಬ ಪ್ರತೀತಿ ಇದೆ. ವೈಗೈ ನದಿಯ ದಡದ ಮೇಲೆ ಸ್ಥಾಪಿತವಾಗಿರುವ ಈ ನಗರ ಪಾಂಡ್ಯರ ಆಳಿಕೆಯಲ್ಲಿ ಅವರ ರಾಜಧಾನಿಯಾಗಿತ್ತು.

ದಕ್ಷಿಣ ತಮಿಳುನಾಡಿನ ಈ ಪ್ರಸಿದ್ಧ ವ್ಯಾಪಾರ ಕೇಂದ್ರ ಪ್ರತಿ ವರ್ಷ ದೇಶ ವಿದೇಶಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಯಾತ್ರಿಕರನ್ನು ಆಕರ್ಷಿಸುತ್ತದೆ. ಒಂದು ಕಾಲದಲ್ಲಿ ಮಧುರೈ ನಗರ ಕದಂಬವನವೆಂತಲೂ ಹೆಸರಾಗಿತ್ತು. ಒಂದು ಸಲ ಧನಂಜಯನೆಂಬ ವ್ಯಾಪಾರಿಯೊಬ್ಬ ಕದಂಬ ಗಿಡದ ಕೆಳಗೆ ಸ್ವಯಂಭುಲಿಂಗವನ್ನು ಪೂಜಿಸುತ್ತಿದ್ದ ದೇವತೆಗಳ ರಾಜ ಇಂದ್ರನನ್ನು ನೋಡಿದನು. ಕೂಡಲೆ ಈ ವಿಷಯವನ್ನು ಪಾಂಡ್ಯರ ರಾಜನಾದ ಕುಲಶೇಖರನಿಗೆ ತಿಳಿಸಿದನು. ಆತನು ಆ ಸ್ಥಳದ ಮಹಿಮೆಯನ್ನು ಅರಿತುಕೊಂಡು ಕಾಲ ಕ್ರಮೇಣ ಆ ಲಿಂಗದ ಸುತ್ತಲೂ ಇದ್ದ ಅರಣ್ಯ ಪ್ರದೇಶವನ್ನು ಸ್ವಚ್ಛಗೊಳಿಸಿ ಅಲ್ಲಿ ಭವ್ಯ ಸುಂದರವಾದ ಶ್ರಿ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಅದರ ಸುತ್ತಲೂ ಕಮಲ ಆಕಾರದ ನಗರವೊಂದನ್ನು ನಿರ್ಮಿಸಿದನು. ಈ ನಗರದ ನಾಮಕರಣದ ದಿನ ಶಿವನೇ ಪ್ರತ್ಯಕ್ಷವಾಗಿ ಬಂದು ಆಶೀರ್ವದಿಸಿದನೆಂದು ಕಥೆ ಇದೆ.

ಪವಿತ್ರ ಅಮೃತವು ಶಿವನ ಜಡೆಯಿಂದ ನೆಲವನ್ನು ಸ್ಪರ್ಶ ಮಾಡಿ ನಗರವನ್ನು ಪವಿತ್ರಗೊಳಿಸಿತು ಎಂಬ ನಂಬಿಕೆ ಇದೆ. (ಅಮೃತಕ್ಕೆ ತಮಿಳಿನಲ್ಲಿ ಮಧು ಎನ್ನುತ್ತಾರೆ ಎಂದುಕೊಂಡಿದ್ದೆನೆ.) ಅದೇ ಕಾರಣಕ್ಕೆ ಈ ನಗರಕ್ಕೆ ಮಧುರಪುರಿ ಅಥವಾ ಮಧುರೈ ಎಂಬ ಹೆಸರು ಬಂದಿದೆ. ಭಾರತದ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲೂ ಈ ನಗರದ ಬಗ್ಗೆ ಉಲ್ಲೇಖವಿದೆ.

ಕ್ರಿ.ಪೂ. 302ರಷ್ಟು ಹಿಂದೆಯೇ ಮೆಗಾಸ್ತನಿಸ್‌ನು ಮಧುರೈಗೆ ಭೇಟ್ಟಿ ಕೊಟ್ಟಿದ್ದನು. ಪ್ರಸಿದ್ಧ ಇತಿಹಾಸಕಾರರಾದ ಪ್ಲಿನಿ(ಕ್ರಿ.ಶ. 77) ಹಾಗೂ ಪ್ಟೊಲೆಮಿ (ಕ್ರಿ.ಶ. 140) ಅವರ ಯಾತ್ರಾ ಟಿಪ್ಪಣಿಗಳಲ್ಲಿ ಮಧುರೈ ನಗರದ ಬಗ್ಗೆ ಉಲ್ಲೇಖವಿದೆ. ನಂತರ ಮಾರ್ಕೊಪೊಲೊ ಹಾಗೂ ಇಬ್ನ ಬಟೂಟ ಕ್ರಮವಾಗಿ ಕ್ರಿ.ಶ. 1293 ಹಾಗೂ ಕ್ರಿ.ಶ. 1333ರಲ್ಲಿ ಇಲ್ಲಿಗೆ ಭೇಟ್ಟಿ ನೀಡಿದರು. ನಂತರದ ದಿನಗಳಲ್ಲಿ ರೋಮ್ ಮತ್ತು ಗ್ರೀಸ್ ದೇಶಗಳಿಂದ ಬಂದ ಜನ ಮಧುರೈಯನ್ನು ಆಳುತ್ತಿದ್ದ ಪಾಂಡ್ಯರೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಿದರು.

ಕ್ರಿ.ಶ.10ನೇ ಶತಮಾನದಲ್ಲಿ ಈ ರಾಜ್ಯವನ್ನು ಚೋಳರು ವಶಪಡಿಸಿಕೊಂಡರು. ಚೋಳರು ಮಧುರೈಯನ್ನು ಕ್ರಿ.ಪೂ.920ರಿಂದ ಸುಮಾರು 13ನೇ ಶತಮಾನದ ಆರಂಭದವರೆಗೂ ಆಳಿದರು. ಆದರೆ ಕ್ರಿ.ಶ.1223ರಲ್ಲಿ ಪಾಂಡ್ಯರು ಕಳೆದು ಹೋದ ತಮ್ಮ ಸಾಮ್ರಾಜ್ಯವನ್ನು ವಶಪಡಿಸಿಕೊಂಡು ಮತ್ತೇ ರಾಜ್ಯಭಾರ ನಡೆಸತೊಡಗಿದರು. ಪಾಂಡ್ಯರು ತಮಿಳು ಭಾಷೆ, ಕಲೆ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಸಾಕಷ್ಟು ಶ್ರಮಿಸಿದರು. ಇವರ ಕಾಲದಲ್ಲಿ ಬಹಳಷ್ಟು ಮಹಾನ್ ಕೃತಿಗಳು

ಹೊರಬಂದವು. ತನ್ನ ಗಂಡ ಕೋವಲನ್‌ನಿಗಾದ ಅನ್ಯಾಯವನ್ನು ತಾಳಲಾರದೆ ಮಧುರೈ ನಗರವನ್ನೆ ಸುಟ್ಟು ಹಾಕಿದ ಕನ್ನಗಿ ಎಂಬ ಸ್ತ್ರೀಯೊರ್ವಳ ಮೇಲೆ ಆಧಾರಿತ ಕೃತಿ "ಶಿಲಾಪತಿಕರಂ" ಇದೇ ಕಾಲದಲ್ಲಿ ಪ್ರಕಟವಾಯಿತು.

ಆದರೆ ಕ್ರಿ.ಶ. 1311 ಏಪ್ರಿಲ್‌ನಲ್ಲಿ ದೆಹಲಿಯ ಚಕ್ರವರ್ತಿ ಅಲ್ಲಾಉದ್ದೀನ್ ಖಿಲ್ಜಿಯ ಮುಖ್ಯ ಸೇನಾಧಿಪತಿಯಾಗಿದ್ದ ಮಲ್ಲಿಕ್ ಕಾಫ಼ರನು ಈ ನಗರದ ಮೇಲೆ ದಂಡೆತ್ತಿ ಬಂದು ಸಾಕಷ್ಟು ಪ್ರಮಾಣದಲ್ಲಿ ಮುತ್ತು, ರತ್ನ, ಹವಳ ಮತ್ತಿತರ ಅತ್ಯಮೂಲ್ಯ ಸಂಪತ್ತನ್ನು ಲೂಟಿ ಮಾಡಿಕೊಂಡು ಹೋದನು. ಹೀಗೆ ಮುಸ್ಲಿಂ ಸುಲ್ತಾನರಿಂದ ಹಲವಾರು ಬಾರಿ ದಾಳಿಗೊಳಗಾದ ಪಾಂಡ್ಯರ ರಾಜ್ಯ ಮಧುರೈ ಕ್ರಿ.ಶ. 1323ರಲ್ಲಿ ದೆಹಲಿಯ ತುಘಲಕರ ಕೈವಶವಾಯಿತು.

ಮುಂದೆ ಕ್ರಿ.ಶ.1371ರಲ್ಲಿ ವಿಜಯನಗರದ ದೊರೆಗಳು ಮಧುರೈಯನ್ನು ಆಕ್ರಮಿಸಿಕೊಂಡರು. ಆದರೆ ಹೀಗೆ ವಶಪಡಿಸಿಕೊಂಡ ರಾಜ್ಯಗಳನ್ನು ಅವರು ಸ್ಥಳೀಯ ರಾಜ್ಯಪಾಲರೆನಿಸಿಕೊಂಡಿದ್ದ ನಾಯಕರ ಆಳ್ವಿಕೆಗೆ ಬಿಡುತ್ತಿದ್ದರು. ರಾಜ್ಯಗಳ ಆಳ್ವಿಕೆ ಸುಗಮವಾಗಿ ನಡೆಯಲೆಂದು ಈ ರೀತಿಯ ಒಂದು ಪದ್ಧತಿಯನ್ನು ಅವರು ಹುಟ್ಟು ಹಾಕಿದ್ದರು ಹಾಗೂ ನಾಯಕರು ಈ ಅರಸರಿಗೆ ವರ್ಷಕ್ಕೆ ಇಂತಿಷ್ಟು ಅಂತಾ ಒಂದು ನಿರ್ದಿಷ್ಟ ಮೊತ್ತವನ್ನು ಕಂದಾಯವಾಗಿ ಸಲ್ಲಿಸುತ್ತಿದ್ದರು.

ಆದರೆ ವಿಜಯನಗರದ ಚಕ್ರವರ್ತಿ ಶ್ರೀಕೃಷ್ಣದೇವರಾಯನ ಮರಣದ ನಂತರ ಅಂದರೆ ಕ್ರಿ.ಶ. 1530ರಲ್ಲಿ ಈ ನಾಯಕರು ಸಾಕಷ್ಟು ಪ್ರಬಲರಾಗಿ ತಮ್ಮ ತಮ್ಮ ರಾಜ್ಯಗಳ ಮೇಲೆ ಹಿಡಿತ ಸಾಧಿಸಿಕೊಂಡಿದ್ದರು. ಇಂಥ ನಾಯಕರಲ್ಲಿ ಒಬ್ಬನಾಗಿದ್ದ ಶ್ರಿ ತಿರುಮಲೈ ನಾಯಕ (ಕ್ರಿ.ಶ.1623–1659) ತಾನು ಮಧುರೈ ನಗರದ ಸುತ್ತ ಮುತ್ತ ಅತ್ಯಂತ ಸುಂದರ ದೇವಸ್ಥಾನಗಳು, ಅರಮನೆಗಳನ್ನು ನಿರ್ಮಿಸಿ ಸಾಕಷ್ಟು ಜನಪ್ರಿಯ ನಾಯಕರಲ್ಲಿ ಒಬ್ಬನಾಗಿದ್ದನು. ಆತನ ಕಲಾಪ್ರೇಮಕ್ಕೆ ಸಾಕ್ಷಿಯಾಗಿ ಶ್ರೀ ಮೀನಾಕ್ಷಿ ದೇವಸ್ಥಾನದ ರಾಜಗೋಪುರ, ಪುದುಮಂಟಪ ಹಾಗೂ ತಿರುಮಲೈ ನಾಯಕರ ಅರಮನೆ ಇಂದಿಗೂ ಐತಿಹಾಸಿಕ ಸ್ಮಾರಕಗಳಾಗಿ ಅಚ್ಚಳಿಯದೆ ನಿಂತಿವೆ.

ಆದರೆ ಕಾಲ ಕ್ರಮೇಣ ನಾಯಕರ ಹಿಡಿತ ಸಡಿಲಗೊಂಡು ಮಧುರೈ ಭಾರತಕ್ಕೆ ವ್ಯಾಪಾರಕ್ಕೆಂದು ಆಗಮಿಸಿದ್ದ ಈಸ್ಟ್ ಇಂಡಿಯಾ ಕಂಪನಿಯ ಬ್ರಿಟಿಶರ ಕೈಗೆ ಜಾರತೊಡಗಿತು. ಹೀಗೆ ವಶಪಡಿಕೊಂಡ ರಾಜ್ಯಗಳನ್ನು ನೋಡಿಕೊಳ್ಳಲು 1781ರಲ್ಲಿ ಇಂಡಿಯಾ ಕಂಪನಿಯು ತನ್ನ ಅಧಿಕಾರಿಗಳನ್ನು ನೇಮಿಸತೊಡಗಿತು. ಈ ರೀತಿಯಾಗಿ ನೇಮಕಗೊಂಡವನೇ ಮಧುರೈ ನಗರದ ಪ್ರಪ್ರಥಮ ಕಲೆಕ್ಟರ್ ಜಾರ್ಜ್ ಪ್ರೊಕ್ಟರ್.

ಇದೀಗ ಸ್ವಾತಂತ್ರ್ಯ ಬಂದ ನಂತರ, ಮಧುರೈ ತಮಿಳುನಾಡಿನ ಒಂದು ಪ್ರಮುಖ ಪ್ರವಾಸಿ ಹಾಗೂ ವ್ಯಾಪಾರಿ ಕೇಂದ್ರವಾಗಿ ಬೆಳೆದು ನಿಂತಿದೆ. ಈ ನಗರ ಮಲ್ಲಿಗೆ ಹೂವುಗಳಿಗೆ ಸುಪ್ರಸಿದ್ಧ. ಮಲ್ಲಿಗೆ ಹೂಗಳು ಇಲ್ಲಿಂದ ಭಾರತಾದ್ಯಂತ ವಿವಿಧ ನಗರಗಳಿಗೆ ದಿನ ನಿತ್ಯ ರವಾನೆಯಾಗುತ್ತವೆ. ಕೊಡೈಕೆನಾಲ್, ಮುನ್ನಾರ್, ತೆಕ್ಕಡಿ, ರಾಮೇಶ್ವರಂ, ಕುಟ್ರಾಲಂ ಹಾಗೂ ಕನ್ಯಾಕುಮಾರಿ ಮುಂತಾದ ಪ್ರಸಿದ್ಧ ಪ್ರವಾಸಿ ಕೇಂದ್ರಗಳಿಗೆ ಮಧುರೈ ಕೇಂದ್ರ ಬಿಂದುವಾಗಿದೆ. ನಗರವು ಆನೈಮಲೈ (ಆನೆಬೆಟ್ಟ), ಪಸುಮಲೈ (ಹಸುಬೆಟ್ಟ) ಹಾಗು ನಾಗಮಲೈ(ನಾಗರಬೆಟ್ಟ) ಎಂಬ ಹೆಸರಿನ ಚಿಕ್ಕ ಚಿಕ್ಕ ಬೆಟ್ಟಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ಬೆಟ್ಟಗಳು ಆಯಾ ಪ್ರಾಣಿಗಳ ಆಕಾರವನ್ನು ಹೊಂದಿರುವದರಿಂದ ಈ ಹೆಸರು ಬಂದಿವೆ.

ಬೆಂಗಳೂರಿನಿಂದ ಮಧುರೈ ಬಸ್ ಮೂಲಕ 8 ಘಂಟೆ ಹಾಗೂ ರೈಲಿನ ಮೂಲಕ ಹನ್ನೊಂದು ಘಂಟೆಯ ಪ್ರಯಾಣ. ಪ್ರತಿನಿತ್ಯ ಖಾಸಗಿ ಹಾಗೂ ಸರಕಾರಿ ಲಕ್ಸುರಿ, ಹವಾ ನಿಯಂತ್ರಿತ ವೊಲ್ವೊ ಬಸ್‌ಗಳ ಸೌಲಭ್ಯವಿದೆ. ಅಲ್ಲದೇ **ಮೈಸೂರು–ಟ್ಯುಟಿಕಾರ್ನ್ ಎಕ್ಸ್‌ಪ್ರೆಸ್** ರೈಲು ಪ್ರತಿ ನಿತ್ಯ ಬೆಂಗಳೂರು–ಮಧುರೈಗಳ ನಡುವೆ ಸಂಚರಿಸುತ್ತದೆ.

**ಟಿಪಿಬಳಗ ಚಿನಕುರಳಿ –1:**
2001 ಮೇ ತಿಂಗಳಲ್ಲಿ ಆನಂದ–ಸರೂ ವೈನಿ ಅವರ ಚಿರಂಜೀವ ಚೇತನ ಹುಟ್ಟಿದಾಗ
ನಮ್ಮ ಕವಿ–ಗಾಯಕ **ಶ್ರೀನಿವಾಸ ಗುಡಿ** ಪ್ರತಿಕ್ರಿಯಿಸಿದ್ದು ಹೀಗೆ:

**ಆ**ನಂದಪ್ಪ ಅಪ್ಪನಾದ ಅತ್ಯಂತ ಈ ಆನಂದದ ಅವಧಿಯಲ್ಲಿ..
ಆತ್ಮೀಯ ಆನಂದಪ್ಪನವರಿಗೂ, ಅವರ ಅರ್ಧಾಂಗಿಯವರಿಗೂ..
ಅತಿಥಿ ಮರಿ–ಆನಂದನ ಆಗಮನ..
ಅನಂತ ಅಭಿನಂದನೆಗಳು.. ಶುಭಾಶಯಗಳು..

ಆಗಮಿಸಿದ ಅತಿಥಿ ಮರಿ–ಆನಂದನವರಿಗೂ..
ಆನಂದ ಅನ್ನುವ ಹೆಸರಿಗೇ ಸಾರ್ಥಕತೆ ತಂದು..
ನಗಿಸಿ, ನಗುವ, ನಗೆಯ ಹಂಚಿ ನೋವ ಮರೆಸುವ ಅಪರೂಪದ ಕಲೆಗಾರ
ಅಪ್ಪನ ಪಡೆದಿದ್ದಕ್ಕೆ ಧನ್ಯವಾದಗಳು..
ಮತ್ತು ಹೃತ್ಪೂರ್ವಕ ಶುಭ–ಹಾರೈಕೆ–ಆಶೀರ್ವಾದಗಳು..!
**– ಶ್ರೀನಿವಾಸ ಗುಡಿ**

ಇದಕ್ಕೆ ನಮ್ಮ **ಆನಂದ ಹಿರೇಮಠರು** ಪ್ರತಿಕ್ರಿಯಿಸಿದ್ದು ಹೀಗೆ:

ನಮ್ಮ ಕವಿರಾಜ ಶ್ರೀಮಾನ್ ಗುಂಡಣ್ಣನ "ಅ" ಕಾರದ ಶುಭಾಶಯ ಪತ್ರ ಓದಿ ಭಾಳ ಖುಶಿ ಆತು.
ಥ್ಯಾಂಕ್ಸೂ..! ನಿಮ್ಮಾಯಿ.. ನೀನೂ ಭಾರೀ ಬಿಡಪಾ.. ಖರೇನ ಕ(ಪಿ)ವಿ ನೋಡು ನೀನು..!
ಈ ಪತ್ರದ ಒಂದು ಪ್ರತಿಯನ್ನು ಇಂದೇ ಜಮಖಂಡಿಗೆ ರವಾನೆ ಮಾಡಲಾಗುವದು.
– ಆನ್ಯಾ.

## ಸರ್ವಜ್ಞನ ವಚನಗಳು

ಸಂಗ್ರಹ : ಶ್ರೀಕಾಂತ. ಎಸ್. ಕೆ.

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನನೆ ಪರರ ಬಗೆದೊಡಿ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ ॥೧೦।

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿತು ನಡೆವ ಸತಿಯಾಗಿ
ಸ್ವರ್ಗಕ್ಕೆ ಕಿಚ್ಚುಬಿದ್ದಂತೆ ಸರ್ವಜ್ಞ ॥೧೧।

ಆಡದಲೆ ಕೊಡುವವನು ರೂಢಿಯೊಳಗುತ್ತಮನು
ಆಡಿ ಕೊಡುವವನು ಮಧ್ಯಮನು
ಅಧಮ ತಾನಾಡಿ ಕೊಡದವನು ಸರ್ವಜ್ಞ ॥೧೨॥

ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ
ದುರ್ಜನರ ಸಂಗ ಬಚ್ಚಲ
ಕೊಚ್ಚೆಯಂತಿಹುದು ಸರ್ವಜ್ಞ ॥೧೩।

ಸುಟ್ಟ ಬೂದಿಯ ತಂದು ದಟ್ಟವಾಗಿ ಬಡಿದು
ನೆಟ್ಟನೆಯ ಶ್ರೇಷ್ಠ ಸ್ವರ್ಗವ ಪಡೆವಡೆ
ಕತ್ತೆ ತಾ ಪಟ್ಟ ಕೆಡೆನೆಂದ ಸರ್ವಜ್ಞ ॥೧೪॥

ನಿತ್ಯ ನೀರಲಿ ಮುಳುಗಿ ವಿಪ್ರ ಸ್ವರ್ಗಕ್ಕೆ ಹಾರುವಡೆ
ಎತ್ತಿ ಜನ್ಮವ ನಿತ್ಯ ಜಲದೊಳಿಪ್ಪ
ಕಪ್ಪೆ ಸ್ವರ್ಗಕೆ ಹತ್ತಬೇಕೆಂದ ಸರ್ವಜ್ಞ ॥೧೫॥

ಮೆತ್ತಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ
ನೆಟ್ಟನೆಯ ಶ್ರೇಷ್ಠ ಸ್ವರ್ಗವ ಪಡೆವಡೆ
ಸಾಣೆಕಲ್ಲು ಪಟ್ಟ ಕೆಡೆನೆಂದ ಸರ್ವಜ್ಞ ॥೧೬॥

ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲವಿಲ್ಲ ಬಲ್ಲವರಿದ್ದು ಸಾಹಿತ್ಯ
ಎಲ್ಲರಿಗಲ್ಲ ಸರ್ವಜ್ಞ ॥೧೭॥

ಪುಷ್ಪವಿಲ್ಲದ ಪೂಜೆ ಅಶ್ವವಿಲ್ಲದ ಅರಸ
ಭಾಷೆಬಾರದವಳ ಗೆಳೆತನವು
ವ್ಯರ್ಥಕಾಣಯ್ಯ ಸರ್ವಜ್ಞ ॥೧೮॥

**ಟಿಪಿ ಬಳಗ Faq Series:**

– ಕರದು ಹೆಣ್ಣು ಕೊಡತೆನಿ ಅಂದರ ನಂದು ಬಿ.ಇ. ಮುಗಿಲಿ ತಡಿ ಅಂದ್ನಂತ..!
ಈ ಗಾದೆ ಮಾತಿನ ಕರ್ತೃರು ಯಾರು..?

– ನಮ್ಮ ಮಿತ್ರ "ಗ್ರಾಮೀಣ".



**ಮನೋಲ್ಲಾಸದ ತಾಣ ದಮ್ಮೂರ ದಿಡಗು** *ಸಂಗ್ರಹ : ಅರುಣ ಆರ್. ಯಾದವಾಡ*



**ಬಾಗಲಕೋಟ** ಜಿಲ್ಲೆ ಹುನಗುಂದ ತಾಲೂಕಿನ ದಕ್ಷಿಣಕ್ಕೆ ಇರುವ ಗಡಿಭಾಗದ ಗ್ರಾಮ ದಮ್ಮೂರು ವನಭೋಜನಕ್ಕೆ, ಒಂದು ದಿನದ ಪ್ರವಾಸಕ್ಕೆ ಕುಟುಂಬ ಸಮೇತ ಬಂದು ಮನೋಲ್ಲಾಸ ಪಡೆಯಲು ಪೂರಕವಾಗುವಂತಹ ತಾಣ.

ಹುನಗುಂದ– ಗುಡುರ ಮುಖ್ಯರಸ್ತೆಯ ವಡಗೇರಿ ಎಂಬ ಗ್ರಾಮದಿಂದ ಪೂರ್ವಾಭಿಮುಖವಾಗಿ ೩ ಕಿ.ಮಿ. ಕ್ರಮಿಸುವಷ್ಟರಲ್ಲಿ ಸಿಗುವ ದಮ್ಮೂರ ಎಂಬ ಗ್ರಾಮವನ್ನು ದಾಟಿ ಕೂಗಳತೆ ಹೋಗುವಷ್ಟರಲ್ಲಿ ಪುರಾತನ ಕೆರೆಯೊಂದರ ದರ್ಶನವಾಗುತ್ತದೆ. ಕೆರೆಯ ದಂಡೆಯ ಮೇಲಿರುವ ದಾರಿಗುಂಟ ಮುಂದೆ ಸಾಗಿದಂತೆಲ್ಲ ಕಡಿದಾದ ಗುಡ್ಡ, ಇಡೀ ಗುಡ್ಡದ ಹಸಿರು ವಾತಾವರಣ, ಕೆಳಗಡೆ ಹರಿವ ನೀರು, ದಟ್ಟವಾದ ಕಾಡು ಎಲ್ಲವೂ ನಾವು ಯಾವುದಾದರೂ ಘಟ್ಟ ಪ್ರದೇಶದಲ್ಲಿ ಇರುವೆವೇನೋ ಎಂಬ ಅನುಭವ ಮೂಡಿಸುತ್ತದೆ. ಹಾಗೆಯೇ ಮುಂದುವರೆದರೆ ಜುಳುಜುಳು ಹರಿವ ನೀರು, ವಿಶಾಲವಾದ ಬಂಡೆಗಳು, ವಿಹರಿಸಲು ಉಸುಕು ಮಿಶ್ರಿತ ಭೂಮಿ, ನುಣುಪಾದ ಕಲ್ಲುಗಳು. ಅದನ್ನೆಲ್ಲಾ ನೋಡುತ್ತಾ ಮುಂದೆ ಸಾಗಿದಾಗ ಕಡಿದಾದ ಗುಡ್ಡದ ಕಲ್ಲಿನ ಸಂದಿಯಲ್ಲಿ ಹುಟ್ಟಿ ಬೇರುಬಿಟ್ಟ ಆಲ, ಬಸರಿ ಮರದ ಬೇರು, ಕಲ್ಲಿನ ಸಂದಿಗುಂಟ ಸುರಿಯುವ ನೀರು ಜಲಪಾತವನ್ನು ನೆನಪಿಸುತ್ತದೆ. ನೀರು ಬೀಳುವಲ್ಲಿರುವ ವಿಶಾಲವಾದ ಬಂಡೆಗಳು ಜಲಕ್ರೀಡೆಗೆ ಹೇಳಿ ಮಾಡಿಸಿದಂತಿವೆ.

ಗುಡ್ಡದ ಮೇಲೆ ನೀರಿನ ಮೂಲವಿರದಿದ್ದರೂ ವರ್ಷವಿಡೀ ನೀರು ಸುರಿಯುತ್ತಲೇ ಇರುತ್ತದೆ. ಮಳೆಗಾಲದಲ್ಲಂತೂ ತುಂಬಾ ಮನೋಹರವಾಗಿ ಕಾಣುವ ಇಲ್ಲಿ ದಿಡಗಿನ ಬಸವೇಶ್ವರ ಎಂಬ ದೇವಾಲಯವಿದ್ದು ಪ್ರಶಾಂತತೆಗೆ, ಮೆರಗು ತಂದಿದೆ. ಇತ್ತೀಚೆಗೆ ಈ ಸ್ಥಳದಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು ಪ್ರವಾಸಿಗರ ಸಂಖ್ಯೆ ಹೆಚ್ಚಾಗಲು ಕಾರಣವಾಗಿವೆ. ಆಗಾಗ ಮದುವೆಗಳೂ ನಡೆಯುತ್ತಿವೆ.

ಬದುಕಿನ ಎಲ್ಲ ಜಂಜಾಟ ಮರೆತು ಕೆಲಹೊತ್ತು ನೆಮ್ಮದಿ ಪಡೆಯಲು, ಕುಟುಂಬ ಸಮೇತ ಬಂದು ಆನಂದದಾಯಕವಾಗಿ ಕಾಲ ಕಳೆದು ಮನೆ ಸೇರಲು ಈ 'ದಮ್ಮೂರ ದಿಡಗು' ಪ್ರಶಸ್ತ ಸ್ಥಳವಾಗಿದೆ. ವರ್ಷವಿಡೀ ಇಲ್ಲಿ ಮನಮೋಹಕ ವಾತಾವರಣವಿರುವುದಾದರೂ ಜೂನ್‌ನಿಂದ ಜನವರಿವರೆಗೆ ದಿಡಗಿನ ಹರಿವು ಹೆಚ್ಚಾಗಿದ್ದು ಆಕರ್ಷಣೀಯವಾಗಿರುತ್ತದೆ. ಈ ಸ್ಥಳಕ್ಕೆ ಬರಲು ಗುಡೂರ, ಹುನಗುಂದ, ಹೂಲಗೇರಿ, ಹನಮಸಾಗರಗಳಿಂದ ತಕ್ಕಮಟ್ಟಿನ ವಾಹನ ಸೌಕರ್ಯ ಇದೆಯಾದರೂ ಸ್ವಂತ ವಾಹನ ತರುವುದು ಕ್ಷೇಮಕರ.

## ಓ ನನ್ನ ಚೇತನ ಆಗು ನೀ ಅನಿಕೇತನ..

ರಚನೆ : ಕುವೆಂಪು

ಸಂಗ್ರಹ : ಶ್ರೀಕಾಂತ. ಎಸ್. ಕೆ.

ರೂಪರೂಪಗಳನು ದಾಟಿ ನಾಮ ಕೋಟಿಗಳನು ಮೀಟಿ
ಯೆದೆಯ ಬಿರಿಯೆ ಭಾವದೀತಿ ।

ಯೆಲ್ಲಿಯೂ ನಿಲ್ಲದಿರು ಮನೆಯನೆಂದು ಕಟ್ಟದಿರು
ಕೊನೆಯನೆಂದು ಮುಟ್ಟದಿರು ಓ ಅನಂತವಾಗಿರು ।

ಅನಂತ ತಾನ್ ಅನಂತವಾಗಿ ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗು ಆಗು ಆಗು ಆಗು ಆಗು ।

## ಟಿಪಿಬಳಗ ಚಿನಕುರಳಿ –2:

2001 ಮೇ ತಿಂಗಳಲ್ಲಿ ಪ್ರಕಾಶ ರಾಜಗೋಳಿ ಮೊಟ್ಟ ಮೊದಲ ಬಾರಿಗೆ ನಮ್ಮ ಬಳಗದಲ್ಲಿ ಮೊಬೈಲ್ ಖರೀದಿ ಮಾಡಿದಾಗ ನಮ್ಮ ಬೆಳ್ಳುಬ್ಬಿ ಸ್ವಾಮಿಗಳು ಬರೆದ ಒಂದು ಚುಟುಕ:

ಶ್ರೀಮಾನ್ ಮೊಬೈಲ್ ರಾಜ್ ಅವರು ಯಶಸ್ಸಿನ ಮ್ಯಾಲ ಯಶಸ್ಸನ್ನು
ಪಡಕೊಂಡು NRK ರಾಜ್ ಎಂಬ ಖ್ಯಾತಿಯೊಂದಿಗೆ ಈಗ ಮತ್ತೇ
ಇನ್ನೊಂದು ಗರಿಯನ್ನು ತಮ್ಮ ತಲೆಗೆ ಏರಿಸಿಕೊಂಡು ಈಗ ಮತ್ತೇ
ಮೊಬೈಲ್ ರಾಜ್‌ನಾಗಿ ಮತ್ತೇ ತಮ್ಮ ಎಡೆಬಿಡದ ಪ್ರವಾಸವನ್ನು
ಮಾಡುವದರೊಂದಿಗೆ NRK ರಾಜ್ ಎಂಬ ಪಟ್ಟವನ್ನು ತಮ್ಮ
ಜೇಬಿನಲ್ಲಿ ಸಿಕ್ಕಿಸಿಕೊಂಡು ಟಾಟಾನಗರದ ಕಡೆಗೆ ಹೋಗುತ್ತಿರುವ
ಮೊಬೈಲ್ ರಾಜಾಗೆ ಟಾಟಾ ... Wish you happy jarooooony…!

– **ಆನಂದ ಹಿರೇಮಠ.**

**2005 ಬ್ರೇಕಿಂಗ್ ನ್ಯೂಸ್ :** ಈ ರಾಜಗಳ ಸರಣಿಯಲ್ಲಿ ಪ್ರಕಾಶ ರಾಜಗೋಳಿ ಅವರು ಇದೀಗ ಸ್ಯಾಪ್ ರಾಜ ಎಂದು ಮರುನಾಮಕರಣ ಹೊಂದಿದ್ದಾರೆ.

# ಜಳಕದ ಪುಳಕಕ್ಕೆ ಹೊಗೇನಕಲ್

ಸಂಗ್ರಹ : ಅರುಣ ಆರ್. ಯಾದವಾಡ



**'ಹೊಗೇನಕಲ್' ಎಂಬ ಹೇಸರೇ ಕನ್ನಡದ್ದು, ಕರ್ನಾಟಕದ್ದು. ಇಲ್ಲಿ ಜಲಧಾರೆಗಳು ಎತ್ತರದ ಬಂಡೆಗಳ ಮೇಲಿಂದ ಧುಮುಕುವಾಗ ನೀರ ಹನಿಗಳು ಗಾಳಿಯೊಂದಿಗೆ ಬೆರೆತು ದಟ್ಟನೆಯ 'ಹೊಗೆ'ಯನ್ನುಂಟುಮಾಡುತ್ತವೆ. ಇದರಿಂದಾಗಿಯೇ ಈ ಸ್ಥಳಕ್ಕೆ 'ಹೊಗೇನಕಲ್' ಎಂಬ ಅನ್ವರ್ಥನಾಮ ರೂಢಿಗೆ ಬಂದಿದೆ. ಧರ್ಮಪುರಿಯಲ್ಲಿ ಈಗಲೂ ಕನ್ನಡಿಗರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಕನ್ನಡಿಗರ ಪ್ರಭಾವದಿಂದ ಈ ಸ್ಥಳಕ್ಕೆ 'ಹೊಗೇನಕಲ್' ಎಂಬ ಕನ್ನಡ ಹೆಸರು ಬಂದಿದೆ ಎನ್ನಬಹುದು.**

'ನೀರಿನ ಹೊಗೆ'ಯಾಡುತ್ತಿದ್ದ ಹೊಗೇನಕಲ್‌ನಲ್ಲಿ ಈಗ 'ವಿವಾದದ ಹೊಗೆ' ಕಾಣಿಸಿಕೊಂಡಿದೆ!

ಹೊಗೇನಕಲ್‌ನ ವೈಶಿಷ್ಟ್ಯವೇನು?

ಕಾವೇರಿ ತನ್ನ ಹಾದಿಯಲ್ಲಿ ಸೃಜಿಸಿರುವ ಎರಡನೇ ದೊಡ್ಡ ಜಲಪಾತ ಹೊಗೇನಕಲ್. ಮೇಕೆದಾಟುನಿಂದ ಮುಂದೆ ತಮಿಳುನಾಡನ್ನು ಸ್ಪರ್ಶಿಸುವ ಕಾವೇರಿ, ತಮಿಳುನಾಡನ್ನು ಪ್ರವೇಶಿಸಲು ನಾಚಿಕೆಯೋ ಎಂಬಂತೆ ಕರ್ನಾಟಕದ ಗಡಿಯಲ್ಲೇ ಸಾಗುತ್ತಾಳೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಚಿನಿಂದ ಮೆಟ್ಟೂರು ಸಮೀಪದ ಪಾಲಕ್‌ವರೆಗೂ ಉಭಯ ರಾಜ್ಯಗಳ ಗಡಿಯಲ್ಲೇ ದಕ್ಷಿಣಾಭಿಮುಖವಾಗಿ ಕಾವೇರಿ ಪ್ರವಹಿಸುತ್ತದೆ. ಅಂದರೆ ಹತ್ತಾರು ಮೈಲಿ ದೂರದವರೆಗೂ ಕಾವೇರಿ ನದಿಯೇ ಉಭಯ ರಾಜ್ಯಗಳ ಗಡಿರೇಖೆ. ಹೊಗೇನಕಲ್ ಜಲಪಾತ ಇರುವುದು ಕೂಡ ಉಭಯ ರಾಜ್ಯಗಳ ಗಡಿಯಲ್ಲೆ.

ಜಲಪಾತದ ಸ್ಥಳದಲ್ಲಿ ತಮಿಳುನಾಡು ಸರ್ಕಾರ ತನ್ನ ಗಡಿ ಪ್ರದೇಶದಲ್ಲಿ ಕಾಲ ಕಾಲಕ್ಕೆ  ಉತ್ತಮ ಸೌಲಭ್ಯಗಳಿಂದ

ಅಭಿವೃದ್ಧಿಪಡಿಸಿ ಅದನ್ನು ಸುಸಜ್ಜಿತ ಪ್ರವಾಸಿ ಕೇಂದ್ರವಾಗಿ ರೂಪಿಸಿದೆ. ಹೋಟೆಲ್, ಲಾಡ್ಜ್, ಯೂತ್ ಹಾಸ್ಟೆಲ್, ಅಂಚೆ–ತಂತಿ ಕಛೇರಿ ಹೀಗೆ ಸಕಲ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಆದರೆ ಕರ್ನಾಟಕದ ಗಡಿ ಪ್ರದೇಶ ಇದಕ್ಕೆ ತದ್ವಿರುದ್ಧ. ಹೊಗೇನಕಲ್ ತಲುಪಲು ಎರಡು ಮಾರ್ಗಗಳಿವೆ. ಒಂದು ಬೆಂಗಳೂರಿಂದ ಹೊಸೂರು– ಪೆನ್ನಾಗರಂ ಮಾರ್ಗ (ತಮಿಳುನಾಡು ಮಾರ್ಗ). ಇನ್ನೊಂದು ಕೊಳ್ಳೇಗಾಲ– ಮಹದೇಶ್ವರ ಬೆಟ್ಟ– ಗೋಪಿನಾಥಂ ಮಾರ್ಗ (ಕರ್ನಾಟಕ).



ಹೊಗೇನಕಲ್‌ನ ನಿಜವಾದ ಸೌಂದರ್ಯವನ್ನು ಸವಿಯಬೇಕೆಂದರೆ ಕರ್ನಾಟಕದ ಕಡೆಯಿಂದ ಪ್ರವೇಶಿಸಬೇಕು. ಮಹದೇಶ್ವರ ಬೆಟ್ಟದಿಂದ ಹೊಗೇನಕಲ್‌ಗೆ ೪೭ ಕಿ.ಮೀ. ದೂರವಿದೆ. ಸ್ವಂತ ವಾಹನವಿದ್ದರೆ ಮಾತ್ರ ಈ ಮಾರ್ಗ ಅನುಕೂಲ. ಏಕೆಂದರೆ ಮಹದೇಶ್ವರ ಬೆಟ್ಟದಿಂದ ಹೊಗೇನಕಲ್‌ಗೆ ರಸ್ತೆ ಇದೆ. ಸಾರಿಗೆ ಸೌಲಭ್ಯವಿಲ್ಲ. (ರಾಜ್ಯ ಸಾರಿಗೆ ಸಂಸ್ಥೆ ಇತ್ತ ಕಣ್ತೆರೆದು ನೋಡಲಿ).

ಜಲಪಾತದ ಸಮೀಪ ಕರ್ನಾಟಕದ ಗಡಿಯಲ್ಲಿ ಮಾರುಕೊಟ್ಟಾಯ್ ಎಂಬ ಸ್ಥಳ ಸಿಗುತ್ತದೆ. ಅಲ್ಲಿಂದ ಜಲಪಾತದ ಬಳಿಗೆ ೧ ಕಿ.ಮೀ. ದೂರ ನದಿ ಹರಿಯುವ ದಿಕ್ಕಿಗೆ ವಿರುದ್ಧವಾಗಿ ದೋಣಿಯಲ್ಲಿ ಪ್ರಯಾಣ ಮಾಡಬೇಕು. ದೋಣಿ ಮುಂದೆ ಮುಂದೆ ಸಾಗುತ್ತಿದ್ದಂತೆ ನದಿಯ ಇಕ್ಕೆಲಗಳಲ್ಲೂ ಕಾವಲು ಗೋಡೆಗಳಂತೆ ಬೃಹದಾಕಾರವಾಗಿ ಎದ್ದು ನಿಂತಿರುವ ಎತ್ತರವಾದ ಬಂಡೆಗಳು ಎದುರಾಗುತ್ತವೆ. ಮುಂದೆ ಜಲಪಾತದ ನಯನ ಸುಂದರ ದೃಶ್ಯ. ನದಿ ನೀರು ಬಂಡೆಗೆ ತಾಗಿ ಮುತ್ತು ಚೆಲ್ಲಿದಂತೆ ಚದುರಿ ಬೀಳುವ ಅಪೂರ್ವ ನೋಟ! ಇನ್ನೂ ಹತ್ತಿರಕ್ಕೆ ಸಮೀಪಿಸುತ್ತಿದ್ದಂತೆ ಕಿವಿಗಡಚಿಕ್ಕುವಷ್ಟು ಜಲಧಾರೆಗಳ ಮೊರೆತ. ಒಂದಲ್ಲ, ಎರಡಲ್ಲ... ಹತ್ತಾರು ಜಲಪಾತಗಳು! ದೋಣಿಯಲ್ಲಿ ಕುಳಿತು ಜಲಧಾರೆಗಳ ಹತ್ತಿರಕ್ಕೇ ಹೋಗಿ ಅದರ ಸೌದರ್ಯವನ್ನು ಆಸ್ವಾದಿಸಬಹುದು. ಇಂತ ಅವಕಾಶ ಬೇರೆ ಜಲಪಾತಗಳಲ್ಲಿ ಸಿಗಲಾರದು. ನದಿಯನ್ನು ದಾಟಿ ತೂಗು ಸೇತುವೆ ಮೇಲೆ ಎತ್ತರದಲ್ಲಿ ನಿಂತರೆ ಜಲಪಾತಗಳ ಪಕ್ಷಿನೋಟ ಅಕ್ಷಿಗಳಿಗೆ ಗೋಚರಿಸುತ್ತದೆ.

ಹೊಗೇನಕಲ್‌ನಲ್ಲಿ ಕಾವೇರಿಯ ಎರಡು ಪ್ರಮುಖ ಕವಲುಗಳೂ ಮತ್ತೆ ಹಲವು ಕವಲುಗಳಾಗಿ ಹತ್ತಾರು ಜಲಪಾತಗಳನ್ನು ಸೃಷ್ಟಿಸಿವೆ. ಜಲಪಾತದಲ್ಲಿ ಜಳಕವಾಡಲು ಸ್ತ್ರೀ ಪುರುಷರಿಗೆ ಪ್ರತ್ಯೇಕ ಸ್ನಾನ ಘಟ್ಟಗಳನ್ನು ನಿರ್ಮಿಸಲಾಗಿದೆ. ನಿಮಗೆ ಇಷ್ಟವಾದರೆ ದುಡ್ಡು ಕೊಟ್ಟು ಜಟ್ಟಿಗಳ ಕೈಯಿಂದ ಮಸಾಜ್ ಮಾಡಿಸಿಕೊಳ್ಳಬಹುದು.

ತಮಿಳುನಾಡಿನ ಗಡಿಯಲ್ಲಿ ಮೊಸಳೆ ಫಾರಂ, ಪ್ರಾಣಿ ಸಂಗ್ರಹಾಲಯ, ಸಸ್ಯಅಭಿವೃದ್ಧಿ ಕೇಂದ್ರ ಮುಂತಾದ ಪ್ರವಾಸಿ

ಆಕರ್ಷಣೆಗಳಿವೆ. ಕರ್ನಾಟಕ ಸರ್ಕಾರ ಮನಸ್ಸು ಮಾಡಿದರೆ ನಮ್ಮ ಗಡಿಯನ್ನು ತಮಿಳುನಾಡಿಗಿಂತ ಉತ್ತಮ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು.

**ಮುಂಜಾನೆದ್ದು ಕುಂಬಾರಣ್ಣ**

***- ಸಂಗ್ರಹ : ಶ್ರೀಕಾಂತ್. ಎಸ್. ಕೆ.***

ಮುಂಜಾನೆದ್ದು ಕುಂಬಾರಣ್ಣ ಹಾಲುಬಾನುಂಡನಾ
ಹಾರ್ಯಾಡಿ ಮಣ್ಣಾ ತುಳಿದ್ಯಾನಾ ।
ಹಾರಿ ಹಾರ್ಯಾಡಿ ಮಣ್ಣ ತುಳಿದು ತಾ ಮಾಡ್ಯಾನಾ
ಯಾರ್ಯಾರು ಹೊರುವಂತ ಬರಾಳಿ ॥

ಹೊತ್ತಾರೆದ್ದು ಕುಂಬಾರಣ್ಣ ತುಪ್ಪ ಬಾನುಂಡಾನಾ
ಘಟ್ಟಿಸಿ ಮಣ್ಣ ತುಳಿದ್ಯಾನಾ
ಘಟ್ಟಿಸಿ ಮಣ್ಣ ತುಳಿದು ತಾ ಮಾಡ್ಯಾನಾ
ನಿದ್ರೆಲು ಹೊರುವಂತ ಬರಾಳಿ ॥

ಅಕ್ಕಿಹಿಟ್ಟು ನಾನು ತುಂಬ್‌ಕೊಂಡು ತಂದಿವ್ನಿ
ಗಿಂಡೀಲಿ ತಂದಿವ್ನಿ ತಿಳಿದುಪ್ಪಾ
ಗಿಂಡೀಲಿ ತಂದಿವ್ನಿ ತಿಳಿದುಪ್ಪಾ ಕುಂಬಾರಣ್ಣಾ
ತಂದೀಡು ನಮ್ಮ ಬರಾಳಿ ।

ಕುಂಬಾರಣ್ಣಾನ ಮಡದಿ ಕಡಗಾದ ಕೈಯಿಟ್ಟು
ಕೊಡದಾ ಮ್ಯಾಲೇನಾ ಬರದಾಳಾ
ಕೊಡದಾ ಮ್ಯಾಲೇನಾ ಬರದಾಳಾ ಕಲ್ಯಾಣದಾ
ಶರಣ ಬಸವನಾ ನಿಲಿಸ್ಯಾಳಾ ।

**ಟಿಪಿ ಬಳಗ Faq Series:**

– ಅಲ್ಲಾ ಈ **ಆನ್ಯಾ ಅಂದರೇನು..?

**ಆನ್ಯಾ ಅಂದರ "ಸುಮ್ಮನೆ ಸೀರಿಯಸ್ಸಾಗಿ ಅಂದೆ ಅಷ್ಟೆ.. ನೀವು ಜೋಕ್ ಅಂತ ತಿಳಕೊಂಡು ಮನಸ್ಸಿಗೆ ಹಚಗೋಬ್ಯಾಡ್ರಿ..!" ಅಂತ ಅರ್ಥ..!



## ಜ್ಯೂನಿಯರ್ ತಾರೆಯರ ಬಗ್ಗೆ ಒಂದಷ್ಟು..

- ಅರುಣ ಆರ್. ಯಾದವಾಡ

ನಮ್ಮ ಬಹಳಷ್ಟು ಮಿತ್ರರ ಒತ್ತಾಯದ ಮೇರೆಗೆ ಜ್ಯೂನಿಯರ್ ತಾರೆಯರ ಬಗ್ಗೆ ಒಂದಷ್ಟು ಮಾಹಿತಿಯನ್ನು ಇಲ್ಲಿ ಪ್ರಕಟಿಸಲಾಗಿದೆ.

| ತಿಂಗಳು | ಜ್ಯೂನಿಯರ್ ತಾರೆಗಳು | ಜನ್ಮ ದಿನ |
|---|---|---|
| ಜನೇವರಿ | ನೇಹಾ ಗಂಗಾಧರ ಅಣ್ಣಿಗೇರಿ | 18ನೇ ಜನೇವರಿ 1999 |
| ಏಪ್ರಿಲ್ | ಸಿದ್ಧಾಂತ ಪುಂಡಲೀಕ ಸತ್ಯನಾಯಕ | 6ನೇ ಏಪ್ರಿಲ್ 2002 |
| ಏಪ್ರಿಲ್ | ಸೌದಾಮಿನಿ ಗಿರೀಶ ಬೆಳಂದೂರ | 18ನೇ ಏಪ್ರಿಲ್ 2004 |
| ಮೇ | ಚೇತನ್ ಆನಂದ ಹಿರೇಮಠ | 5ನೇ ಮೇ 2001 |
| ಮೇ | ಮೋಕ್ಷಾ ಗಂಗಾಧರ ಅಣ್ಣಿಗೇರಿ | 8ನೇ ಮೇ 2002 |
| ಮೇ | ಅಪೇಕ್ಷಾ ಆನಂದ ಯಾದವಾಡ | 23ನೇ ಮೇ 2000 |
| ಜೂನ್ | ಅನುಶ್ರೀ ಅರುಣ ಯಾದವಾಡ | 10ನೇ ಜೂನ್ 2000 |
| ಅಕ್ಟೋಬರ್ | ಸಂಕಲ್ಪ ರಾಜು ಹಿರೇಗೌಡರ | 2ನೇ ಅಕ್ಟೋಬರ್ 2002 |
| ಅಕ್ಟೋಬರ್ | ಅನೀಶ್ ಆನಂದ ಹಿರೇಮಠ | 5ನೇ ಅಕ್ಟೋಬರ್ 2005 |
| ಅಕ್ಟೋಬರ್ | ತನವಿ ರೋಹಿತ್ ಮಿಸ್ರಾ | 19ನೇ ಅಕ್ಟೋಬರ್ 2003 |
| ಅಕ್ಟೋಬರ್ | ಶುಚಿ ಶ್ರೀಕಾಂತ ಕರಗುದರಿ | 23ನೇ ಅಕ್ಟೋಬರ್ 2004 |
| ಏಪ್ರಿಲ್ | ಶ್ರೀದೀಪ್ತಿ ಶ್ರೀಕಾಂತ್ ಕೆ | 29ನೇ ನವ್ಹಂಬರ್ 2004 |
| ಡಿಸೆಂಬರ್ | ಮಹೀ ಶ್ರೀನಿವಾಸ ಗುಡಿ | 10ನೇ ಡಿಸೆಂಬರ್ 2003 |
| ಡಿಸೆಂಬರ್ | ಸೃಜನಾ ಗಿರೀಶ ಮೆಟಗುಡಮಠ | 23ನೇ ಡಿಸೆಂಬರ್ 2002 |

**ಇಲ್ಲ ಕೆಲವೊಂದಷ್ಟು ಇಂಟರೆಸ್ಟಿಂಗ್ ಸಂಗತಿಗಳು:**

- ಸೀನಿಯರ್ಸ್ ತಂಡದಲ್ಲಿ ಕೇವಲ 3 ಜನ ಹೆಣ್ಣು ಮಕ್ಕಳಿದ್ದರೆ , ಜ್ಯೂನಿಯರ್ಸ್ ತಂಡ ಪೂರ್ತಿ ಉಲ್ಟಾ-ಪುಲ್ಟಾ..! ಅಲ್ಲ ಏನಿದ್ದರೂ ಹೆಣ್ಣುಮಕ್ಕಳದ್ದೇ ರಾಜ್ಯಭಾರ..14 ಜನರಲ್ಲಿ 10 ಜನ ಹೆಣ್ಣು ಮಕ್ಕಳು..! ಅದೂ ನೇಹಾಳ ನಾಯಕತ್ವದಲ್ಲಿ..! ಛೇ ಛೇ..! ನಮ್ಮ ಹುಡುಗರದು ಪೂರ್ತಿ ಮೈನಾರಿಟಿ ಆಗೋಯ್ತು..!


-ಆನಂದ ಹಿರೇಮಠರ ಇಬ್ಬರೂ ಹುಡುಗರು ಹುಟ್ಟಿದ್ದು.. 5ನೇ ತಾರೀಕಿನಂದು..!
ಇದೇನು ತಾರೀಕು ನೆನಪು ಇಡೋದು ಈಜಿ ಆಗಲೆಂದೊ ಅಥವಾ ಅಪ್ಪನ ಸಂಬಳ ಬಂದ ವಾರವೇ ಪಾರ್ಟಿ ಮಾಡೊಕೊ..? ** ಆನ್ಸಾ..!

- ಮಹೀ ಅಮ್ಮನ ಬರ್ತ್‌ಡೇ ಆದ ಮರುದಿನಾನೇ ತನ್ನ ಬರ್ತ್‌ಡೇ ಇಟ್‌ಗೊಂಡ್ ಬಿಟ್ಟಿದಾಳೆ..! ಓಹೋ ಬಲೆ ಕಿಲಾಡಿ..!

**ಮಾಂಗಲ್ಯಂ ತಂತು ನಾನೇನ .. ..**

– **ಅರುಣ ಆರ್. ಯಾದವಾಡ**

| ತಿಂಗಳು | ಟಿಪಿಬಳಗ ದಂಪತಿಗಳು | ವಿವಾಹ ದಿನ |
|---|---|---|
| ಏಪ್ರಿಲ್ | ಕವಿತಾ–ಪುಂಡಲೀಕ ಸತ್ಯನಾಯಕ | 19ನೇ ಏಪ್ರಿಲ್ 2000 |
| ಏಪ್ರಿಲ್ | ಮೃಣಾಲಿನಿ–ಶ್ರೀನಿವಾಸ ಗುಡಿ | 20ನೇ ಏಪ್ರಿಲ್ 1999 |
| ಮೇ | ಭಾರತಿ–ಗಿರೀಶ ಮೆಟಗುಡಮಠ | 20ನೇ ಮೇ 2001 |
| ಮೇ | ದೀಪಾ–ಪ್ರಕಾಶ ರಾಜಗೋಳಿ | 25ನೇ ಮೇ 2003 |
| ಜೂನ್ | ವೇದವತಿ–ರಾಜು ಹಿರೇಗೌಡರ | 1ನೇ ಜೂನ್ 2001 |
| ಜೂನ್ | ಅಶಾ–ರೋಹಿತ್ ಮಿಸ್ರಾ | 8ನೇ ಜೂನ್ 2002 |
| ಜುಲೈ | ಶ್ರೀಲತಾ–ಶ್ರೀಕಾಂತ್ ಎಸ್ ಕೆ | 12ನೇ ಜುಲೈ 2001 |
| ಅಕ್ಟೋಬರ್ | ತೇಜಸ್ವಿನಿ–ಅರುಣ ಯಾದವಾಡ | 5ನೇ ಅಕ್ಟೋಬರ್ 1998 |
| ನವಂಬರ್ | ಶೋಭಾ–ಗಂಗಾಧರ ಅಣ್ಣಿಗೇರಿ | 16ನೇ ನವಂಬರ್ 1997 |
| ಡಿಸೆಂಬರ್ | ಶುಭಶ್ರೀ–ಗಿರೀಶ ಬೆಳಂದೂರ | 30ನೇ ನವಂಬರ್ 2000 |
| ಡಿಸೆಂಬರ್ | ಛಾಯಾ–ಆನಂದ ಯಾದವಾಡ | 11ನೇ ಡಿಸೆಂಬರ್ 1998 |
| ಡಿಸೆಂಬರ್ | ಸರ್ವಮಂಗಳಾ–ಆನಂದ ಹಿರೇಮಠ | 14ನೇ ಡಿಸೆಂಬರ್ 1998 |
| ಡಿಸೆಂಬರ್ | ನಯನಾ–ಬಸವರಾಜ ಯಾದವಾಡ | 28ನೇ ಡಿಸೆಂಬರ್ 2002 |
| ಡಿಸೆಂಬರ್ | ಶ್ರೀಲಕ್ಷ್ಮಿ–ಶ್ರೀಕಾಂತ ಕರಗುದರಿ | 29ನೇ ಡಿಸೆಂಬರ್ 2002 |
| ಡಿಸೆಂಬರ್ | ನೂರ್ ಜಹಾನ್–ತಾಹೀರ್ ಸನದಿ | 13ನೇ ಡಿಸೆಂಬರ್ 2002 |



ನೀರಿಗೆ ನೈದಿಲೆಯೇ ಶೃಂಗಾರ
ಸಾಗರಕೆ ತೆರೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಗಗನಕೆ ಶಶಿಯೇ ಶೃಂಗಾರ
ಈ ಐಟಿ ಐಕಳಿಗೆ ಈ–ಮೇಲ್‌ಗಳೇ ಶೃಂಗಾರ..!
– ಅನಾಮಧೇಯ

## ಬಿ.ವಿ.ಬಿ. ಗೆ ಹಚ್ಚಿದ ಮ್ಯಾಲ ಏನೇನ್ ಕಂಡ್ರಿ..?

ರಚನೆ: ಶ್ರೀನಿವಾಸ. ಆರ್. ಗುಡಿ, ಅಂತಿಮ ಬಿ.ಇ (ಎಲೆಕ್ಟ್ರಾನಿಕ್ಸ್),

ಬಿ.ವಿ.ಬಿ. ಗೆ ಹಚ್ಚಿದ ಮ್ಯಾಲ ಏನೇನ್ ಕಂಡ್ರಿ..?
"ಇಂಜಿನಿಯರ್" ಅಂತಾ ಹೇಳಿ ಬೆನ್ ತಟಗೊಂಡ್ರಿ..!
"ರಿಜಲ್ಟ ವಾಶ್" ಅಂತಾ ಚಿಂತಿ ಹಚಗೊಂಡ್ರ ಹ್ಯಾಂಗ್ರಿ..?
ಸಾಯೊದ್ರೊಳಗ ಮುಗಸಬೇಕು ಬಿ.ಇ. ಡಿಗ್ರಿ..
ನಾವು ಸಾಯೊದ್ರೊಳಗ ಮುಗಸಬೇಕು ಬಿ.ಇ. ಡಿಗ್ರಿ..!
॥1॥
ಹುಡುಗುರೆಲ್ಲಾ ಬಡಬಡಿಸತಾರ..ಶೀಟು ಶೀಟು..!
ಆಹಾ ಶೀಟು ಶೀಟು..!
ಕನಸಿನ್ಯಾಗೂ ಕಾಣತಾರ ಸರ್ಕೀಟು..!
ಆಹಾ ಸರ್ಕೀಟು..!
ಎಕ್ಸಾಮ್ ಟೈಮನ್ಯಾಗ ಮಾಡಿದ್ರೂನು ನೈಟ್ ಔಟೂ..
ಆಹಾ ಎಕ್ಸಾಮ್ ಟೈಮನ್ಯಾಗ ಮಾಡಿದ್ರೂನು ನೈಟ್ ಔಟೂ..!
ಡಿಸೆಂಬರ್‌ಗೂ ನಮಗೂ ಎಂದೂ ಬಿಡದ ನಂಟು..
ಸಪ್ಲಿಮೆಂಟರಿಗೂ ನಮಗೂ ಎಂದೂ ಬಿಡದ ನಂಟು..!
॥2॥
ಪಾಸಾದ್ರೇನು, ಫೇಲಾದ್ರೇನು ಗ್ಯಾರಂಟಿ..
ಆಹಾ ಗ್ಯಾರಂಟಿ..!
ಎಷ್ಟೇ ತುಟ್ಟಿ ಆದ್ರೂನು ಗ್ಯಾರಂಟಿ..
ಆಹಾ ಗ್ಯಾರಂಟಿ..!
ರಿ–ವ್ಯಾಲ್ಯುಏಶನ್ ಹಾಕವರಿಲ್ಲಿ ಕಂಡಾಪಟ್ಟಿ..!
ನಮ್ಮಿಂದಲೇ ನಡಿತೈತಿ ಯುನಿವರ್ಸಿಟಿ..!
॥3॥
ಖಾಲಿ ಖಾಲಿ ಕಾಣಸ್ತಾವ ಲ್ಯಾಬೋರೆಟರಿ..
ಆಹಾ ಲ್ಯಾಬೋರೆಟ್ರಿ..!
ಭಣ ಭಣ ಅಣಸ್ತಾವ ಲೈಬ್ರರಿ..
ಆಹಾ ಲೈಬ್ರರಿ..!
ಮರವೇ ನೋಡಿ ನಮಗೆಲ್ಲಾ ವಿದ್ಯಾಕಾಶಿ..
ಮಥುಂ ಕೆಳಗ ಕುಂಡ್ರುದಂದ್ರ ನಮಗೆಲ್ಲಾ ಭಾಳ ಖುಶಿ..
ನಮಗ ಮಥುಂ ಕೆಳಗ ಕುಂಡ್ರುದಂದ್ರ ಭಾಳ ಖುಶಿ..!!
॥4॥
ಕಾಲೇಜು ತುಂಬಾ ತುಂಬಾರೀ ಸ್ವೀಟಿ.. ಬ್ಯೂಟಿ..
ಆಹಾ ಸ್ವೀಟಿ.. ಬ್ಯೂಟಿ..!
ಇವರಿಗೆ ಸೀಟಿ ಹೊಡಿಯೋದೇನೆ ಹುಡುಗರ ಡ್ಯೂಟಿ..
ಪಡ್ಡೆ ಹುಡುಗರ ಡ್ಯೂಟಿ..!
ನಖರಾದಲ್ಲಿ ನಾಚ್ಕೋಬೇಕು ದಿವ್ಯಾಭಾರತಿ..

ಇವರ ನಖರಾದಲ್ಲಿ ನಾಚ್ಕೋಬೇಕು ದಿವ್ಯಾಭಾರತಿ..!
ಬೆನ್ನ ಹಿಂದೆ ಬಿದ್ದವರಿಗೆಲ್ಲಾ ದೇವ್ರೆ ಗತಿ..
ಇವರ ಬೆನ್ನ ಹಿಂದೆ ಬಿದ್ದವರಿಗೆಲ್ಲಾ ದೇವ್ರೆ ಗತಿ..!
ll5ll
ಬಿ.ವಿ.ಬಿ.ಯ ಹುಡುಗ್ಯಾರೆಲ್ಲಾ ಭಾಳ ಚಾಲೂ..
ಆಹಾ ಭಾಳ ಸ್ಟೈಲು.. ಸ್ಟೈಲು..!
ಗಾಡಿ ಇದ್ದೋರಿಗೆನೇ ಇವ್ರು ಕೊಡೊದು ಸ್ಮೈಲು..
ಆಹಾ ಸ್ಮೈಲು. ಸ್ಮೈಲು..!
ನಮ್ಮಂಥವರಿಗೆ ತೆರೆದೇ ಇದೆ ಜಾಬಿನ್ ಮಾರ್ಗ..
ಆಹಾ ನಮ್ಮಂಥವರಿಗೆ ತೆರೆದೇ ಇದೆ ಜಾಬಿನ್ ಮಾರ್ಗ..
ಜಾಬಿನ್‌ಗಿಂತ ಇಲ್ಲವೇ ಇಲ್ಲಾ ಬೇರೆ ಸ್ವರ್ಗಾ..
ಆಹಾ ಜಾಬಿನ್‌ಗಿಂತ ಇಲ್ಲವೇ ಇಲ್ಲಾ ಬೇರೆ ಸ್ವರ್ಗಾ..
ll6ll
ಸೆಮಿಸ್ಟರಿನಿಂದಾ ಈಯರ್‍ಗೆ ಚೇಂಜಂತೆ..
ಆಹಾ ಚೇಂಜಂತೆ..!
ಮತ್ತೆ ಈಗ ಸೆಮಿಸ್ಟರೇ ಬೇಕಂತೆ..
ಆಹಾ ಪುನಃ ಬೇಕಂತೆ..!
ಅಂತೂ ಇಂತೂ ಕಾಲೇಜಾಯ್ತು ಕುರಿಗೋಳ ಸಂತೆ..
ಸಾಯೋರ್ ಮಾತ್ರಾ ಹುಡುಗುರು ತಾನೇ..ಯಾರಿಗೇನ್ ಚಿಂತೆ..
ಸಾಯೋರ್ ಮಾತ್ರಾ ಹುಡುಗುರು ತಾನೇ..ಯಾರಿಗೇನ್ ಚಿಂತೆ..
ll7ll
ಬರ್ತಾ ಇದ್ರೂ ಇಲ್ಲಿ ನಮಗೆ ನೂರಾರು ಕಷ್ಟ..
ಅಯ್ಯೋ ನೂರಾರು ಕಷ್ಟ..
ಬಿ.ವಿ.ಬಿ ನೇ ನೋಡಿ ನಮಗೆ ಎಂದಿಗೂ ಶ್ರೇಷ್ಠ..
ಎಂದೆಂದಿಗೂ ಶ್ರೇಷ್ಠ...!
ನೂರಾರು ಜನುಮಾ ಬಂದ್ರೂ ನಮಗೆ ಇಲ್ಲ ನಷ್ಟ..
ನೂರಾರು ಜನುಮಾ ಬಂದ್ರೂ ನಮಗೆ ಇಲ್ಲ ನಷ್ಟ..!
ಬಿ.ವಿ.ಬಿ.ಲಿ ಕಲಿಯೊದಂದ್ರೇ ನಮಗೆ ಇಷ್ಟ..
ಬಿ.ವಿ.ಬಿ.ಲಿ ಕಲಿಯೊದಂದ್ರೇ ನಮಗೆ ಇಷ್ಟ.. ನಮಗೆ ಇಷ್ಟ.. ನಮಗೆ ಇಷ್ಟ....!

ಈ ವೃಂದ ಗೀತೆ, 'CLIMAX', BVB Annual Day-1993 ರ ದಿನ ಪ್ರಸ್ತುತ ಪಡಿಸಲ್ಪಟ್ಟಿತು ಮತ್ತು ಕಾಲೇಜಿನಲ್ಲಿ ಜನಪ್ರಿಯವಾದ ಹಾಡಾಗಿ ಅಪಾರ ಪ್ರಶಂಸೆಗೆ ಒಳಗಾಯಿತು. ಅದರ ಕೀರ್ತಿ ಈ ಕೆಳಕಂಡ ಮಿತ್ರರಿಗೆ ಸಲ್ಲುತ್ತದೆ.

| ಮುಖ್ಯ ಗಾಯಕರು: | ಸಹ ವೃಂದ: |
|---|---|
| ಶ್ರೀನಿವಾಸ. ಆರ್. ಗುಡಿ. | ಗಿರೀಶ ಪಿ. ಮೆಟಗುಡಮಠ. |
| ಗಿರೀಶ. ಎಸ್. ಬೆಳಂದೂರ. | ಗಂಗಾಧರ. ಬಿ. ವಾಲಿ. |
| | ಶ್ರೀಕಾಂತ. ಎಸ್. ಕೆ. |
| | ಆನಂದ. ಸಿ. ಹಿರೇಮಠ. |
| | ತಾಹೀರ. ಎ. ಸನದಿ. |

(ಎಲ್ಲರೂ ಬಿ.ಇ (ಎಲೆಕ್ಟ್ರಾನಿಕ್ಸ್) ವಿದ್ಯಾರ್ಥಿಗಳು – 1992–93)

## ಗಂಗಣ್ಣಾ ವಾಲಿ ಚೆನ್ನೈ ಬಸ್ಸು ಹತ್ತಿದ ಪ್ರಸಂಗ

### – ರಚನೆ: ಗಂಗಣ್ಣನೇ ಬರೆದ ಒಂದು ಹಳೇ e-mail

ಸಂದರ್ಭ: ಎಂದಿನಂತೆ ಶುಕ್ರವಾರ ರಾತ್ರಿ ಊರಿಗೆ ಹೋಗಿ, ಸೋಮವಾರ ದಿನ ಬೆಳಿಗ್ಗೆ ಆಫ್ಹೀಸಿಗೆ ಬಂದ ನಂತರ ಬರೆದ ಒಂದು ಮೇಲ್.

ನಮಸ್ಕಾರ್ರಿಪಾ..!

ಹೂಂನಪಾ.. ಇವತ್ತು ಮುಂಜಾನೆ ಬಂದೆ.. ಪ್ರಯಾಣ ಎಲ್ಲಾ ಸೌಖ್ಯವಾಗಿತ್ತು..ಆದರ ಹೋಗುವಾಗ ಸ್ವಲ್ಪಾ ಗದ್ದಲಾ ಆತು.. ನಾನು Bluelines ಬಸ್ಸಿಗೆ ಟಿಕೀಟು ಬುಕ್ ಮಾಡಿದ್ದೆ. 9–10ಕ್ಕ ಬಸ್ ಡಿಪಾರ್ಚರ್ ಇತ್ತು. ವಿಜಯನಗರ ಪಿಕಪ್ ಇತ್ತು. ಆ ಪ್ರಕಾರ ನಾನು ವಿಜಯನಗರ ಸ್ಟಾಪಗೆ ನಿಂತಿದ್ದೆ. ಸ್ವಾಮಿ ನನ್ನ ಬಿಡಾಕ ಬಂದಿದ್ದಾ.. ಬಸ್ಸು ಬಂತು.. ಹತ್ತಿ ಕುಂತೆ.. ಟಿಕೆಟ ಕೊಟ್ಟೆ..ಚೆಕ್ ಮಾಡಿ ಕೊಟ್ಟಾ.. ಮುಂದ ಆ ಬಸ್ಸು ರಾಜಾಜಿನಗರ ದಾಟುದರಾಗ ನನಗ ಜೋರ ನಿದ್ದಿ ಹತ್ತಿತ್ತು.. ಸ್ವಲ್ಪ ಹೊತ್ತಿನ ನಂತರ ಮಡಿವಾಳ ಸ್ಟಾಪನ್ಯಾಗ ಬಸ್ಸಿನ ಒಬ್ಬ ಮನಶ್ಯಾ ಬಂದು ನನ್ನನ್ನ ಎಬ್ಬಿಸಿದಾ... ಯಾಕಂದ್ರ ಇನ್ನೊಬ್ಬರದು ಸೇಮ್ ಸೀಟ ನಂಬರ್ ಇತ್ತಂತ..! ಮತ್ತ ಆಗ ಹೇಳತಾನ ಆ ಬಸ್ಸು ಚೆನ್ನೈಗೆ ಹೋಗುದಂತ..! ಹೊಗ್ಗೋ ನಿಮ್ಮ.. ನಿಮ್ಮ.. ! ಟೈಮ್ ನೋಡಿದರ ರಾತ್ರಿ 11–00 ಘಂಟೆ..! ಏನ ಮಾಡತಿ..? ಮತ್ತ ಅದಕ್ಕೈಲೆ ಮೆಜೆಸ್ಟಿಕ್‌ಗೆ ಹ್ವಾದೆ..ಅಲ್ಲಿ ಯಾವುವು ಹುಬ್ಬಳ್ಳಿಗೆ ಹೋಗು ಬಸ್ಸು ಇರಲಿಲ್ಲಾ.. ಮತ್ತ ದಾವಣಗೆರೆಗೆ ಕಟ್–ಜರ್ನಿ ಹೊಡದು.. ಅಲ್ಲಿಂದಾ ಹುಬ್ಬಳ್ಳಿಗೆ ಹೋಗಿ, ಅಲ್ಲಿಂದಾ ಬೆಳಗಾವಿಗೆ ಹೋಗಿ, ಅಲ್ಲಿಂದಾ ಕೊಲ್ಲಾಪುರಕ್ಕ ಹೋಗಿ , ಅಲ್ಲಿ ಒಂದು ದಿವಸ ವಸತಿ ಒಗದು, ಮರದಿವಸ ವಳಸಂಗನ ಮದವಿಗೆ ಬೆಳಗಾವಿಗೆ ಬಂದೆ.

ಹುಡುಗಿ ಸ್ವಲ್ಪ ಗಿಡ್ಡ ಅದಾಳ..ಆದರ ಆಕಿದು ಜಾಬು Tata-Elexi..! ಹಿಂಗಾಗಿ ಏನ ಅಡ್ಡಿ ಇಲ್ಲಾ..! ಒಳ್ಳೇ ಫೇರು..! ಮದವಿಗೆ ಸಂಗ್ಯಾ, ಗದಗಿನ ಮುದುಕ (ರಾಜು ಹೊಂಬಣ್ಣವರ), ಮತ್ತ ಹಾಸ್ಟೆಲ್ ಫ್ರೆಂಡ್ಸು ಕಿರಣ, ಅಶೋಕ ಮತ್ತ ಸುರೇಶ್ ಇಷ್ಟ ಮಂದಿ ಬಂದಿದ್ದರು. ಊಟಕ್ಕ ವಳಸ್ಯಾ ಗೋದಿ ಹುಗ್ಗಿ ಮಾಡಿಸಿದ್ದಾ..!! 1–15ಕ್ಕ ಊಟಕ್ಕ ಹ್ವಾದರ ಆಗಲೇ ಚಪಾತಿ ಖಾಲಿ ಆಗಿದ್ವು...! ಮತ್ತ ನಮ್ಮ ಮ್ಯಾನೇಜರ್ (ಸಂಗ್ಯಾ) ನ್ನ ಕರದು ಚಪಾತಿ ಬ್ಲ್ಯಾಕ್‌ನ್ಯಾಗ ತರಸಿ ಜಡದ್ವಿ..! ಈ ಮದವಿ ವಿಶೇಷಾ ಏನು ಅಂದರ ಜ್ಯೂ॥ಸಂಗೋಜಿ ಬಂದಿದ್ದಾ..! ಭಾರಿ ಅದಾನ..!

ಮತ್ತ ಆಮ್ಯಾಲ ಬರೀತೆನಿ..

Bye 4 now,
ವಾಲಿ.

### ಟಿಪಿ ಬಳಗ Faq Series:

– ಹುಬ್ಬಳ್ಳಿಗೂ ಬೆಂಗಳೂರಿಗೂ ಭೌಗೋಳಿಕವಾಗಿ ಕನಿಷ್ಟ ಅರ್ಧ ಘಂಟೆ ಸಮಯದ ಅಂತರವಿರಬಹುದೆಂದು ಅತ್ಯಂತ ಸೀರಿಯಸ್ ಆಗಿ ವಾದ ಮಾಡಿದ ಭೂಪ ಯಾರು..?

– It is none other than ನಮ್ಮ ಮುಧೋಳ ದೊರೆ ಅಪ್ಪಾವ್ರು..!. ಪುಂಡಲೀಕ ದೊರೆಗಳು..!



## ಬಿಎಸ್ಸೆನ್ನೆಲ್ ಫೋನ್ ಕನೆಕ್ಷನ್ ಪಡೆಯಲು ಮಾಡಿದ ಹರ ಸಾಹಸ

**–ನಮ್ಮ ಆನಂದ ಹಿರೇಮಠರು ಬರೆದ ಒಂದು ಹಳೇ e-mail ನಿಂದ.. (ಏಪ್ರಿಲ್ 2, 2001)**



ಟಿಪಿ ಬಳಗಕ್ಕೆ,

ಒಂದೇ ಸಮನೆ ನಿರಂತರವಾಗಿ ಯಾವದೇ ತೊಂದರೆ ಇಲ್ಲದೆ ಕಾರ್ಯ ನಿರ್ವಹಿಸುವ ಹಾಗೂ ಅದೂ ಅಲ್ಲದೇ ಕ್ವಿಕ್ ಆಗಿ ಕೊಡುತ್ತೇವೆಂದು ನಂಬಿಸಿ ಪೇಪರನಲ್ಲಿ ಹಾಕಿಸಿದ ಜಾಹೀರಾತಿಗೆ ಮಾರು ಹೋಗಿ ಮರುದಿನವೇ ಮೂರು ಹಾಳೆಯ ಫ್ಲಾರ್ಮ್ ತುಂಬಿ ಒಂದು ಸಾವಿರ ಅಡ್ವಾನ್ಸ್ ಕೊಡಲು ಮೂರು ಲೈನಿನ ರಶೀದಿ ನನ್ನದಾಗಿಸಿಕೊಳ್ಳಲು ಆ ಆಫ್ಹೀಸ್ ಮುಂದೆ ನಿಂತಾಗ ಮಾರುದ್ದ ಲೈನ್ ಇರಬಹುದೆಂದು ತಿಳಿದಿದ್ದ ನಾನು ಮೂರು ಕಿಲೊಮೀಟರ್ ಇದ್ದ ಲೈನ್‌ನಲ್ಲಿ ನಿಂತುಕೊಂಡು ಏನೆಲ್ಲಾ ಜೆೃರಾಕ್ಸ್ ಮಾಡಿಕೊಂಡು ಜನ–ಜಂಗುಳಿಯಲ್ಲಿ ಒದ್ದಾಡಿ ಕೊನೆಗೂ ಫ್ಲಾರ್ಮ್ ತುಂಬಿ ಕೊಟ್ಟು ಇನ್ನೇನು ಕೆಲವೇ ಕೆಲವು ದಿನಗಳಲ್ಲಿ ಸಿಕ್ಕೆ ಸಿಗುತ್ತೆ ಅಂತಾ ಖಬರ ಹಾರಿ ಸಿಕ್ಕ–ಸಿಕ್ಕ ಕನ್ಸಲ್ಟಂಟಗಳಿಗೆ (ಇಂಟರವ್ಯೂ ಅರ್ರೆಂಜ್ ಮಾಡಲೆಂದು) ಅಡ್ವಾನ್ಸ್ ಆಗಿ 7 ಡಿಜಿಟ್ಟಿನ ಬಗ್ಗೆ ಹೆಮ್ಮೆಯಿಂದ "ಸರ್ ಇನ್ನೆನು ಒಂದೆರಡು ವಾರದಲ್ಲಿ ಬರುತ್ತೆ ಆಗ ಇಂಟರವ್ಯೂ ಅರೆಂಜ್ ಮಾಡ್ರಿ " ಅಂತಾ ಹೇಳಿದ್ದು ಅಲ್ಲದೇ ನಾನು ತಿರುಗಾಡದ ರಸ್ತೆಗಳಿಲ್ಲ.. ನಾನು ತಿರುಗಾಡದ ಬಸ್ಸುಗಳಿಲ್ಲ_.ನಾನು ಭೆಟ್ಟಿಯಾಗದ ಲೈನಮ್ಯಾನ್‌ಗಳಿಲ್ಲಾ.. ನಾನು ಭೇಟ್ಟಿಯಾಗದ ಜ್ಯೂನಿಯರ್ ಇಂಜಿನಿಯರ್‌ಗಳಿಲ್ಲ.. ನಾನು ಭೇಟ್ಟಿಯಾಗದ ಕ್ಲರ್ಕ ಇಲ್ಲಾ.. ನಾನು ಭೇಟ್ಟಿಯಾಗದ ಸಾಹೇಬರಿಲ್ಲಾ.. ಕೊನೆಗೂ ಗೊತ್ತಾತು ನೋಡ್ರಿ ಈ 7 ಡಿಜಿಟ್ಟಿನ ಮಹಾತ್ಮೆ ಎಂಥಾದ್ದೂ ಅಂತಾ.. ??!!??

ಇನ್ನೇನೂ ನಾನು ಬ್ಯಾಡಪಾ ಈ ಸಹವಾಸ ಅಂತಾ ಬಸವಳಿದು ಕುಂತು ನನ್ನ ಎರಡು ವರ್ಷದ ಸಾಧನೆಯನ್ನು ಮರೆಯಬೇಕೆನ್ನುವಷ್ಟರಲ್ಲಿ..ಬಂದೆ ಬಿಟ್ಟ ಆ ಲೈನಮ್ಯಾನ್ನು 7 ಡಿಜಿಟ್ಟಿನ ಆಸೆ ಹಚ್ಚಲು..!!!!! ಕೊನೆಗೂ ತಂದಿದ್ದಾ ಆ ಲೈನಮ್ಯಾನ ಆ ದೂರವಾಗಿಟ್ಟಿರುವ ದೂರವಾಣಿಯ ಸೆಟ್ಟು.. ಸೆಟ್ಟು ತಂದಿದ್ದಾ ಆದರೆ ಮತ್ತೆ ದೂರವಾಗಿಟ್ಟಾ ಆ ದೂರವಾಣಿಯ ಕರೆಘಂಟೆಯನ್ನು..! ಯಾಕಂದರ ಅವನಿಗೆ ಕೊಡಬೇಕಾಗಿದ್ದ ಗಿಂಬಳ ಕೊಟ್ಟಿರಲಿಲ್ಲಾ..! ಅದನ್ನು ಕೊಟ್ಟ ನಂತರವೇ ಸದ್ದು–ಗದ್ದಲವಿಲ್ಲದ ನನ್ನ ಮನೆಯಲ್ಲಿ ಗದ್ದಲ ಮಾಡುತ್ತಿದೆ ಆ ದೂರವಾಣಿಯ ಘಂಟೆಯ ಸದ್ದು..!!!!!!!


ಹಲೋ ಟಿಪಿ ಬಂಧು ಬಳಗವೇ, ಈಗ ತಾನೇ ಮೊನ್ನೆ ಗುರುವಾರ ನಮ್ಮ ಮನೆಗೆ ಟೆಲಿಫೋನ್ ಕನೆಕ್ಷನ್ ಕೊಟ್ಟಿರುವದರಿಂದ.. ,SO ದಯವಿಟ್ಟು ನೀವೆಲ್ಲರೂ ಅವಶ್ಯವಿದ್ದಾಗ ಮಾತ್ರ ಹಾಗು ನಾನು ಚಾಟ್‌ನಲ್ಲಿ ಸಿಗದೆ ಇದ್ದಾಗ ಹಾಗೂ ನಾನು ಮೇಲ್ ಬರೆಯದೆ ಇದ್ದಾಗ ಹಾಗು ಟಿಪಿ ಬಳಗದಲ್ಲಿ ಭಾಗಿಯಾಗದೇ ಇದ್ದಾಗ ಆಫೀಸಿನ ನನ್ನ ನಂಬರನಲ್ಲಿ ನಾನು ಸಿಗದೇ ಇದ್ದಾಗ ಹಾಗು ಆತ್ಮೀಯ ಮಾತುಗಳಾಡಬೇಕಾದರೆ ಹಾಗು ಏನಾದರೂ ಇಮ್ಮೆಡಿಯೆಟ್ ಇಂಫ್ಲೊ ಕೊಡಬೇಕಾದರೆ ಹಾಗು ಏನಾದರು ಅರ್ಜೆಂಟ್ ಮೆಸೆಜ್ ಕೊಡಬೇಕಾದರೆ ದಯವಿಟ್ಟು ಈ ನಮ್ಮ ಮನೆಯ ಈ ನಂಬರಿಗೆ ಕಾಂಟಾಕ್ಟ ಮಾಡಬೇಕೆಂದು ಕಳಕಳಿಯಿಂದಾ ಬೇಡಿಕೊಳ್ಳುವೆನು.. !

ಜೈಹಿಂದ .. ಸಾರಿ.. ಜೈ ಟೆಲಿಫೋನ್ ಡಿಪಾರ್ಟಮೆಂಟ ಕಿ ..!

ಟಿಪಿ ಬಳಗ Faq Series:

**ಪುಂಡಲೀಕ ಅಂದರೇನು..?

– **ಪುಂಡಲೀಕ ಅಂದರ "ಅದು ಹೋಗಲಿ ಬಿಡು" ಅಂತಾ.



## ನನ್ನ ವಾಷಿಂಗ್ಟನ್ ಭೇಟಿ.. – ಭಾಗ–1

## – SAPರಾಜ ಪ್ರಕಾಶ ರಾಜಗೋಳಿ ಅವರಿಂದ ಒಂದು ವರದಿ.

ನನ್ನ ವಾಶಿಂಗ್ಟನ್ ಡಿ ಸಿ ಭೇಟಿಯ ವರದಿಯನ್ನು ಎರಡು ಭಾಗಗಳಲ್ಲಿ ನಿಮ್ಮ ಮುಂದೆ ಇಡ ಬಯಸುತ್ತೇನೆ. ನಾನು ಶುಕ್ರವಾರ (27 ಫೆಬ್ರವರಿ) ಮಧ್ಯಾಹ್ನ 3.45ಕ್ಕೆ ನನ್ನ ಊರಾದ ಲಿಸ್ಲೆದಿಂದ ಚಿಕಾಗೋ ಕಡೆಗೆ ಟ್ಯಾಕ್ಸಿಯಲ್ಲಿ ಪ್ರಯಾಣ ಬೆಳೆಸಿದೆ. ಇಲ್ಲಿ ಟ್ಯಾಕ್ಸಿಗಳು ಫ್ಲೆಕ್ಸರೇಟ್ (ನಮ್ಮಲ್ಲಿನ ಪ್ರೀಪೆಡ್ ಮಾದರಿ) ಮತ್ತು ಬೆಸ್ಟರೇಟ್ ದರದಲ್ಲಿ ಆಪರೇಟ್ ಮಾಡುತ್ತವೆ. ನಾನು ಪ್ರಯಾಣಿಸಿದ ಯುನಿವರ್ಸಲ್ ಟ್ಯಾಕ್ಸಿ ಡ್ರೈವರನಿಗೆ 2 ಡಾಲರ್ ಟಿಪ್ಸ್ ಕೊಟ್ಟು ಚಿಕಾಗೋದ ಓಹರೆ ವಿಮಾನ ನಿಲ್ದಾಣ ಪ್ರವೇಶಿಸಿದೆ. ಅಲ್ಲಿ ನಮ್ಮ ಮೆಜೆಸ್ಟಿಕ್ಕಿನಲ್ಲಿ ಟ್ರಾವೆಲ್ ಎಜೆಂಟ್ ಆಫೀಸುಗಳು ಇದ್ದಂತೆ ಎಲ್ಲ ಏರಲೈನುಗಳ ಆಫೀಸುಗಳು ಇರುತ್ತವೆ. ನಾವು ನಮ್ಮ ಏರಲೈನು ಆಫೀಸು ಹುಡುಕಿಕೊಂಡು ಬೋರ್ಡಿಂಗ್ ಪಾಸ್ ತೆಗೆದುಕೊಳ್ಳಬೇಕು. ಗುಡಿ ನನ್ನ ಟಿಕೆಟ್ ಆನಲೈನ್ ಸಿಸ್ಟೆಮ್ಮಿನಲ್ಲಿ ಬುಕ್ ಮಾಡಿದ್ದರಿಂದ ನನಗೆ ಹೆಚ್ಚಿಗೆ ಕಷ್ಟವಾಗಲಿಲ್ಲ. ಸೆಕ್ಯುರಿಟಿ ಚೆಕ್ ಮುಗಿಸಿಕೊಂಡು ಫ್ಲಾಯಿಟ್ ಡಿಪಾರ್ಚರ್ ಅನೌನ್ಸಮೆಂಟಗೆ ಕಾಯುತ್ತ ಕೂತೆ. ಇಲ್ಲಿನ ಸೆಕ್ಯುರಿಟಿ ಚೆಕ್ಕಿನ ಮುಂದೆ ನಮ್ಮ ಇಂಡಿಯಾದ ಡೊಮೆಸ್ಟಿಕ್ ಏರ್ಲೈನುಗಳಲ್ಲಿ ಮಾಡುವ ಸೆಕುರಿಟಿ ಚೆಕ್ ತುಂಬಾ ಸ್ಟ್ರಿಕ್ಟ ಎಂದು ನನಗೆ ಅನ್ನಿಸುತ್ತದೆ. ಕ್ಯಾಮೆರ ಕ್ಯಾರಿ ಮಾಡುತ್ತಿದ್ದರೆ ನೆಲದ ಮೇಲೊಂದು ಕ್ಲಿಕ್ ಮಾಡಲು ಹೇಳಿ ಅನ್ಯಥ ನನ್ನ ಒಂದು ಫೋಟೋ ಹಾಳು ಮಾಡುತ್ತಿದ್ದರು ಇಲ್ಲಿ ಹಾಗೇನಿಲ್ಲ.

ಕಿಡಕಿ ಬಾಜೂಕಿನ ಸೀಟಿನಲ್ಲಿ ಆಸೀನನಾಗಿ ಕೂತು ಸುತ್ತ ಕಣ್ಣಾಡಿಸಿದೆ. ಬೇರೆ ಬೇರೆ ಮುಖಭಾವದ, ಬಣ್ಣದ, ಕೂದಲಿನ ಜನ. ಇಂಡಿಯನ್ನಗಳಂತೆ ಕಾಣುವ ಜನ ಇಂಡಿಯನ್ನರು ಆಗಿರಬೇಕೆಂದೇನು ಇಲ್ಲ ಅವರು ನಮ್ಮ ಆರ್ಕ್ ರೈವಲ್ಸ್ ಪಾಕಿಸ್ತಾನಿಗಳೋ ಇಲ್ಲ ಮಗ್ಗಲುಮುಳ್ಳು ಬಾಂಗ್ಲಾದೇಶಿಯರೋ ಆಗಿರಬಹುದು!! ನಿಗದಿತ ಸಮಯಕ್ಕೆ ನಾನು ವಾಶಿಂಗ್ಟನ್ ಡಿ.ಸಿಯ ಇಂಟರನ್ಯಾಶನಲ್ ಏರ್‌ಪೋರ್ಟ್ ಮುಟ್ಟಿದಾಗ ಗುಡಿಯ ಆತ್ಮೀಯ ಸ್ವಾಗತ ಸಿಕ್ಕಿತು. ನೋಡಿ ಯೋಗಾಯೋಗ ಅಂದರೆ ಹೇಗಿರುತ್ತದೆ...... ಆತ ಇಂಡಿಯಾಗೆ ಬಂದಾಗ ನನ್ನನ್ನು ಭೇಟಿ ಮಾಡಲು ಧಾರವಾಡಿನ ನಮ್ಮ ಮನೆಗೆ ಬಂದಿದ್ದ ನಾನು ಸಾಧನಕೇರಿಯ ಲಾಸ್ಟ್ ಬಸ್ಸಸ್ಟಾಪಗೆ ಹೋಗಿ ಅವನನ್ನು ನನ್ನ "ಚಲ್ ಮೇರಿ ಲೂನಾ" ದಲ್ಲಿ ಕೂಡ್ರಿಸಿಕೊಂಡು ಬಂದಿದ್ದೆ. ಅಮೇರಿಕಾಗೆ ನಾನು ಬಂದಾಗ ನನ್ನನ್ನು ಬರಮಾಡಿಕೊಳ್ಳಲು ಹೊಂಡಾ ಕಾರ್ ತೆಗೆದುಕೊಂಡು ಬಂದಿದ್ದಾನೆ!!! ನಮ್ಮ ಟಿಪಿ ಬಳಗದ ಅಂತಃಸತ್ವವೆ ಈ ಪರಸ್ಪರ ಆತ್ಮೀಯತೆ ಅಲ್ಲವೆ?

ನಮ್ಮ ಸವಾರಿ ರಾಜೇಂದ್ರ ಗಲಗಲಿಯವರ ಮನೆಗೆ ಹೊರಟಿತು ಯಾಕಂದ್ರೆ ನಮ್ಮ ಆನಂದಯ್ಯನವರು ತಮ್ಮ ಕುಟುಂಬ ಸಮೇತ ಅಲ್ಲಿ "ಬಿನ್ನಾಯ" ಸ್ವೀಕರಿಸುತ್ತಿದ್ದರು!! ಮುಂದೆ ನಾವೆಲ್ಲ ಸೇರಿ ಗುಡಿ ಮನೆಗೆ ಮುಟ್ಟಿದೆವು. ಮೃಣಾಲಿನಿ ಭಾಭಿ ಮತ್ತು ಅವರ ತಾಯಿಯವರ ಆತ್ಮೀಯ ಸ್ವಾಗತ ಮತ್ತು ಪುಟ್ಟ ಮಹಿಯ ವೆಲ್ಕಮ್ ಸ್ಮೈಲ್ ನನ್ನನ್ನು ಬಳಗದಲ್ಲಿ ಬಿದ್ದಷ್ಟು ಖುಶಿ ನೀಡಿದವು. ಸ್ಯಾಮ್ ಅಂಕಲ್‌ನ ನಾಡಿನಲ್ಲಿ ನಾನು ಏಕಾಂಗಿ ಅಲ್ಲ ಅನ್ನುವ ಭಾವನೆ ಮೂಡಿಸಿದವು. ನಾವು ಊಟ ಮುಗಿಸಿ ಒಂದು ಸುತ್ತು ಸಣ್ಣ ವಾಕಿಂಗು ಮುಗಿಸಿ ಪಡಸಾಲೆಯಲ್ಲಿ ಬಹಳ ಹೊತ್ತಿನವರೆಗೆ ಹರಟುತ್ತಿದ್ದೆವು. ನಮ್ಮ ಬ್ಯಾಚೆಲರ್ ಡೇಸ್ ನಂತರ ಬಹಳ ವರ್ಷಗಳಾದ ಮೇಲೆ ನಾವು ಈ ರೀತಿ ಒಟ್ಟಿಗೆ ಕಳೆದೆವು ಅನ್ನಿಸುತ್ತದೆ. ಶನಿವಾರ (28 ಫೆಬ್) ಬೆಳಗ್ಗೆ ನಮ್ಮ ಪ್ಲಾನ್ ಪ್ರಕಾರ ವಾಷಿಂಗ್ಟನ್ ಡಿಸಿ ನೋಡುವದು ಎಂದು ನಿರ್ಧಾರವಾಗಿತ್ತು. ನಾವೆಲ್ಲ ಗುಡಿ ಮತ್ತು ಗಲಗಲಿಯ ಕಾರುಗಳಲ್ಲಿ ದಂಡಯಾತ್ರೆ ಕೈಗೊಂಡೆವು.

ಗಲಗಲಿಯ ಕಾರಿನಲ್ಲಿ ಜಿಪಿಯೆಸ್ ಸಿಸ್ಟೆಮ್ ಇದೆ ಅವನು ಡೆಸ್ಟಿನೇಷನ್ ಅಡ್ರೆಸ್ ಕೊಟ್ಟರೆ ಸಾಕು ಗಮ್ಯ ಸ್ಥಾನಕ್ಕೆ ತಲುಪಿಸುವ ದಾರಿದೀಪ ಅದು. ಶಾರ್ಟೆಸ್ಟ್ ರೂಟ್ ತೋರಿಸುತ್ತ ಯಾವ್ಯಾವ ಕಡೆಗೆ ತಿರುಗಬೇಕು, ಎಷ್ಟು ದೂರ ಕ್ರಮಿಸಬೇಕು ಇತ್ಯಾದಿ ವಿವರ ಹೇಳುತ್ತ ಹೋಗುತ್ತದೆ. ಇದರಿಂದ ದಾರಿ ಕೇಳಲು ಗಾಡಿ ನಿಲ್ಲಿಸಿ ಜನರನ್ನು ಕೇಳುವದಾಗಲಿ ಅವರು ನಮ್ಮ ಬೆಂಗಳೂರಿನಲ್ಲಿ ಮಾಡುವಂತೆ, ಏನೂ ಗೊತ್ತಿರದಿದ್ದರೂ "ಒಂದ್ ಕೆಲ್ಸ ಮಾಡಿ" ಎನ್ನುತ್ತ ಪೂರ್ತಿ ಊರು ಸುತ್ತಿಸುವದಾಗಲಿ ಮಾಡಲು ಅವಕಾಶವಿಲ್ಲ.

ವಾಷಿಂಗಟನ್ ಡಿಸಿ ಅಮೆರಿಕದ ರಾಜಧಾನಿ. ಇಲ್ಲಿ ಸರ್ಕಾರಿ ಕಚೇರಿಗಳದ್ದೇ ಸಿಂಹ ಪಾಲು. ನಾವೆಲ್ಲ ಇಲ್ಲಿ ವಾಷಿಂಗಟನ್ ಮೆಮೋರಿಯಲ್(ಅಮೇರಿಕದ ಮೊದಲ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್ ಸ್ಮರಣಾರ್ಥ ಕಟ್ಟಿರುವ 500 ಫೂಟ್ ಎತ್ತರದ ಭವ್ಯ ಕಟ್ಟಡ. ಇದರ ಮೇಲ್ತುದಿಗೆ ಹೋಗಿ ಇಡೀ ವಾಷಿಂಗ್ಟನ್ ನಗರವನ್ನು ನೊಡಬಹುದು), ಯುಎಸ್ ಸುಪ್ರೀಮ್ ಕೊರ್ಟ್, ಲೈಬ್ರರಿ ಆಫ್ ಕಾಂಗ್ರೆಸ್(ಪುರಾತನ ಮತ್ತು ಹೆಸರುವಾಸಿ ಗ್ರಂಥಾಲಯ), ಜಾಫ಼ರಸನ್ ಮೆಮೋರಿಯಲ್ (ಅಮೇರಿಕಾದ ಎರಡನೆಯ ಅಧ್ಯಕ್ಷನ ಸ್ಮರಣಾರ್ಥ ನಿರ್ಮಿಸಲಾಗಿರುವ ಸ್ಥಳ) ಮತ್ತು ದೂರದಿಂದ ವ್ಹಾಯಿಟ್ ಹೌಸ್ (ವಾರ್ ಮೊಂಗರ್ ಸಧ್ಯದ ಅಮೇರಿಕದ ಅಧ್ಯಕ್ಷ ಬುಶ್ನ ವಾಸಸ್ಥಳ. ಹತ್ತಿರ ನರಪಿಳ್ಳೆಯೂ ಸುಳಿಯದಂತೆ ಭಾರೀ ಸೆಕ್ಯುರಿಟಿ ಇದೆ). ಮನೆಗೆ ಮರಳುವಾಗ ಇಲ್ಲಿನ ಮಿಲಿಟರಿ ಕೇಂದ್ರ ಸ್ಥಳ ಪೆಂಟಗನ್ ಕೂಡ ನೋಡಿದೆವು. ಮಧ್ಯಾಹ್ನ ಜಫ್ಫರಸನ್ ಮೆಮೋರಿಯಲ್ ಹತ್ತಿರದ ನದಿಯೊಂದರ ದಂಡೆಯಲ್ಲಿ ಕೂತು ಮನೆಯಿಂದ ತಂದ ಚಪಾತಿ, ಪಲ್ಯ, ಬಿಸಿಬೆಳೆ ಭಾತ್, ಮೊಸರನ್ನ ಇತ್ಯಾದಿಗಳನ್ನು ಮನದನಿಯೆ ಭಕ್ಷಿಸಿದೆವು. ಥಾಂಕ್ಸ್ ಟು ದಿ ಪ್ರಿಪರೇಶನ್ಸ್ ಆಫ್ ಶ್ರೀನಿವಾಸ್ ಗುಡಿ, ಮೃಣಾಲಿನಿ ಭಾಭಿ, ಅವರ ತಾಯಿಯವರು, ಸರ್ವಮಂಗಳ ಭಾಭಿ ಮತ್ತು ರಾಜೇಶ್ವರಿ ಭಾಭಿ (ಶ್ರೀಮತಿ ಗಲಗಲಿ).

ನಮ್ಮನ್ನೆಲ್ಲ ಈ ಸ್ಮಾರಕಗಳ ಎದುರು ನಿಲ್ಲಿಸಿ ಫೋಟೋ ತೆಗೆಯುವ ಕೆಲಸವನ್ನು ಹೆಗಲಿಗೊಂದು ಬಗಲಿಗೊಂದು ಕ್ಯಾಮೆರ/ಕ್ಯಾಮಕಾರ್ಡರ್ ನೇತಾಡಿಸಿಕೊಂಡಿದ್ದ ಗಲಗಲಿ ತುಂಬ ಅಚ್ಚು ಕಟ್ಟಾಗಿ ಮಾಡ್ತಾ ಇದ್ದ. ಇದಕ್ಕೆ ಅವನು ಕರೆಯುವ ಹೆಸರು "ಪಟೇಲಗಿರಿ". ನಾನು ಮತ್ತು ಗಲಗಲಿ ಬಹಳ ವರ್ಷಗಳ ನಂತರ ಮೀಟ್ ಮಾಡಿದೆವಾದ್ದರಿಂದ ನಮಗೆ ಗೊತ್ತಿರುವ ಎಲ್ಲರ ಬಗ್ಗೆ ಒಂದು ರೌಂಡ್ ಸಿಂಹಾವಲೋಕನ ಮಾಡಿದೆವು. ಕರ್ನಾಟಕ ರಾಜ್ಯದ ಪ್ರಸಕ್ತ ರಾಜಕೀಯವನ್ನು ಅಪ್ಪಟ ಪಾಲಿಟಿಕಲ್ ಅನಾಲಿಸ್ಟಗಳಂತೆ ವಿಮರ್ಶಿಸಿದೆವು.

ಮಿತ್ರರೆ ಈ ವರದಿ ಹೇಗನ್ನಿಸಿತು ಬರೆದು ತಿಳಿಸಿ. ಮುಂದಿನ ಪತ್ರದಲ್ಲಿ ನಿಮ್ಮನ್ನು ಲುರೇ ಕವರನ್ಸ್ ಎನ್ನುವ ಮಾಯಲೋಕಕ್ಕೆ ಕರೆದೊಯ್ಯುತ್ತೇನೆ. ಅಲ್ಲಿ ವರೆಗೆ ಖುದಾ ಹಾಫ಼ಿಜ಼್.

ಬೈ,
ಪ್ರಕಾಶ

**ಟಿಪಿ ಬಳಗ Faq Series:**



ನಾನು ಕೆಎಸ್ಆರ್‌ಟಿಸಿ ಸ್ಟಾಫ್ ಅಂತಾ ಹೇಳಿ ಬೆಂಗಳೂರು ಸಿಟಿ ಬಸ್ಸಿನಲ್ಲಿ ಮುಂದಿನ ಬಾಗಿಲಿನಲ್ಲಿ ಹತ್ತಿ ಪ್ರಯಾಣ ಮಾಡಿದ ನಮ್ಮ ತಾರೆ ಯಾರು..?

– ಮುಧೋಳದ ನಮ್ಮ ನಾಯಕರಾದ ಅಪ್ಪಾವು’..!

## ನನ್ನ ವಾಷಿಂಗ್ಟನ್ ಭೇಟಿ.. – ಭಾಗ–2

– SAPರಾಜ ಪ್ರಕಾಶ ರಾಜಗೋಳಿ ಅವರಿಂದ ಒಂದು ವರದಿ.

ಡಿಯರ್ ಟಿಪಿ ತಾರೆಗಳೆ,

ನಮ್ಮ ರವಿವಾರದ (29 ಫೆಬ್ರವರಿ) ಪ್ರಯಾಣ ನಿಗದಿಯಾದದ್ದು ಲುರೇ ಕವರನ್ಸ್ ಎನ್ನುವ ಗುಹೆಗಳನ್ನು ಭೇಟಿ ಮಾಡುವದು ಎಂದು. ಎಂಟು ಗಂಟೆಗೆಲ್ಲಾ ರೆಡೀ ಆಗಿಬಿಡುತ್ತೇವೆ ಎಂದು ಗುಡಿ ಹೇಳಿದಾಗ ಮೃಣಾಲಿನಿ ಭಾಭಿ ಅದು ಆಗದ ಮಾತು ಹಾಗೇನಾದರೂ ಆದರೆ 30 ಗ್ರಾಮ್ ಬಂಗಾರ ಕೊಡುವದಾಗಿ ಷರತ್ತು ಹಾಕಿದ್ದರು. ನಮ್ಮ ಪಿವಿಎನ್ ಪಿತಾಮಹ ಸವಾಲನ್ನು ಸ್ವೀಕರಿಸಿಯೂ ಬಿಟ್ಟ!! ಅದು ಕೈಗೂಡಲಿಲ್ಲ ಆ ಮಾತು ಬೇರೆ.
ಚೌ ಚೌ ಭಾತ್ ತಯಾರಿಯೊಂದಿಗೆ ಗಲಗಲಿ ಸಾಹೇಬ್ರು ಪತ್ನಿ ಸಮೇತ ಗುಡಿ ಮನೆಗೆ ಬಂದು ಎಲ್ಲ ಹೆಣ್ಣು ಮಕ್ಕಳನ್ನು ತಮ್ಮ ಗಾಡಿಯಲ್ಲಿ ಕೂಡ್ರಿಸಿಕೊಂಡು ಮುನ್ನಡೆದರೆ ಆನಂದಯ್ಯ ಮತ್ತು ನನ್ನನ್ನು ಕರೆದುಕೊಂಡು ಗುಡಿ ತನ್ನ ಕಾರಿನಲ್ಲಿ ಹಿಂಬಾಲಿಸಿದ. ಅದು ಸುಮಾರು ದೀಡು ತಾಸಿನ ದಾರಿ ಮಾರ್ಗ ಮಧ್ಯದಲ್ಲಿ ಮೈಸೂರಿನ ಸುತ್ತೂರು ಮಠದವರು ಹೊರತಂದಿರುವ ವಚನಗಳ ಸಿ ಡಿ ಕೇಳುತ್ತ ನಾವು ಮಾರ್ಗ ಸವೆಸಿದೆವು.

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ.."
"ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ.."
"ವಚನದಲ್ಲಿ ನಾಮಾಮೃತ ತುಂಬಿ"

ಇತ್ಯಾದಿ ವಚನಗಳಿಗೆ ಎಮ್ ಎಸ್ ಶೀಲ, ಸಂಗೀತ ಕಟ್ಟಿ ಕುಲಕರ್ಣಿ, ಶಂಕರ್ ಭಟ್ ಮುಂತಾದವರು ಸುಶ್ರಾವ್ಯ ಕಂಠದಾನ ಮಾಡಿದ್ದಾರೆ. ಎಚ್. ಕೆ. ನಾರಾಯಣ ಒಳ್ಳೆಯ ಸುಮಧುರ ಸಂಗೀತ ಒದಗಿಸಿದ್ದಾರೆ. ಈ ವಚನಗಳು ನಮ್ಮನ್ನು ಆಧ್ಯಾತ್ಮಿಕ ಲೋಕಕ್ಕೆ ಒಯ್ದು ಒಳ್ಳೆಯ ರಸಾನುಭೂತಿ ನೀಡಿದವು. ಒಮ್ಮೆ ಗುಡಿ ಇನ್ನೊಮ್ಮೆ ಗಲಗಲಿ ಹೀಗೆ ನಾ ಮುಂದು ತಾ ಮುಂದು ಅನ್ನುತ್ತಾ ಗಾಡಿ ಓಡಿಸುತ್ತ ಗಮ್ಯಸ್ಥಾನ ತಲುಪಿದಾಗ ನಡು ಮಧ್ಯಾಹ್ನವಾಗಿತ್ತು. ಶೆನಾಂಡೋಯ್ ನ್ಯಾಶನಲ್ ಪಾರ್ಕಿನ ಘಾಟುಗಳ ನಾಗಮುರಿ ರಸ್ತೆಗಳನ್ನು ಕ್ರಮಿಸಿ ನಾವು ಬೆಟ್ಟದ ತುದಿಗೆ ಮುಟ್ಟಿದ್ದೆವು.

ಇನ್ನು ಮುಂದಿನದು ಲುರೇ ಕವರನ್ಸ್ ಎನ್ನುವ ಅದ್ಭುತ ರಮ್ಯ ಮಾಯಲೋಕದ ವರದಿ. ನಾವೆಲ್ಲ ಗುಹೆಗಳ ದರ್ಶನಕ್ಕೆ ಸಾಲಾಗಿ ಒಳ ನಡೆದೆವು. ಅಮೇರಿಕನ್ ಚೆಲುವೆ ಒಬ್ಬಳು ನಮ್ಮ ಗೈಡ್ ಆಗಿದ್ದಳು. ಅವಳು ಹೇಳಿದಂತೆ "ಈ ಗುಹೆಗಳನ್ನು 1878ರಲ್ಲಿ ಮೂರು ಜನ ಬೆಟ್ಟದ ಕಾಲು ಹಾದಿಯಲ್ಲಿ ನಡೆಯುತ್ತಿದ್ದಾಗ ಕುತೂಹಲಕ್ಕೆಂದು ನೆಲ ಬಗೆದು ಕಂಡು ಹಿಡಿದಿದ್ದೆ ಈ ಅದ್ಭುತ ಮಾಯಲೋಕ". ಇಲ್ಲಿ ಇದನ್ನು ಅಚ್ಚುಕಟ್ಟಾಗಿ ಮೆಂಟೈನ್ ಮಾಡಿರುವ ರೀತಿ, ಬೆಳಕಿನ ವ್ಯವಸ್ಥೆ ಇತ್ಯಾದಿಗಳು ಪ್ರವಾಸಿಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತವೆ. 64 ಎಕರೆ ವಿಸ್ತೀರ್ಣದಲ್ಲಿ ಹರಡಿರುವ ಈ ಗುಹೆಗಳು, ಒಂದೂವರೆ ಮೈಲಿ ದೂರದ ಇವು ಮಿಲಿಯನ್ ವರ್ಷಗಳಷ್ಟು ಮೊದಲೇ ನಿರ್ಮಾಣಗೊಂಡಿವೆ. ಇವುಗಳ ನಿರ್ಮಾಣ ಅಂತರ್ಗತ ನದಿಗಳ (ಅಂಡರಗ್ರೌಂಡ್ ರಿವರ್) ಕೊರೆತದಿಂದ ಆಗಿದೆ ಎಂದರೆ ಸೃಷ್ಟಿಯ ಅದ್ಭುತ ನಿರ್ಮಾಣಗಳ ಸಾಕ್ಷಾತ್ ದರ್ಶನ ನಮಗಾಗುತ್ತದೆ. ಈ ಸುಣ್ಣದ ಕಲ್ಲಿನ ನಿರ್ಮಾಣಗಳು ಒಂದು ಕಿನ್ನರ ಲೋಕವನ್ನೇ ನಮ್ಮ ಕಣ್ಣ ಮುಂದೆ ನಿಲ್ಲಿಸುತ್ತವೆ. ಭೂಗರ್ಭದ ಮಿನರಲ್‌ಗಳು ಸೋರುತ್ತ ಕಾಲಾನುಕ್ರಮದಲ್ಲಿ ಈ ತೆರನಾದ ರಮ್ಯ ಲೋಕವನ್ನೇ ನಮ್ಮ ಮುಂದೆ ನಿಲ್ಲಿಸಿವೆಯಲ್ಲಾ ಇದಕ್ಕೆ ಅದೆಷ್ಟು ಮಿಲಿಯ ವರ್ಷಗಳು ಬೇಕಾದವೋ ಗೊತ್ತಿಲ್ಲ. ಸರಿ ಅದನ್ನು ಒಪ್ಪ ಒರಣವಾಗಿ ಇಟ್ಟಿದ್ದಾರಲ್ಲ ಈ ಅಮೆರಿಕನ್ನರು..! ಅದನ್ನು ನಾವೆಲ್ಲ ಮೆಚ್ಚಲೆಬೇಕು.

ಇಲ್ಲಿನ ನಿರ್ಮಾಣಗಳೇನಾದರೂ ನಮ್ಮಲ್ಲಿ ಇದ್ದಿದ್ದರೆ.. ಅದೆಷ್ಟು ಸಹಸ್ರ ಅಮರನಾಥ ಲಿಂಗಗಳು ಉದ್ಭವ ಆಗುತ್ತಿದ್ದವೊ? ಅದೆಷ್ಟು ಸ್ಥಳ ಪುರಾಣಗಳು ಬರೆಯಲ್ಪಟ್ಟು ರಾಮಾಯಣ ಮಹಾಭಾರಥದ ಕಥೆಗಳಿಗೆ ಕಡ್ಡಾಯವಾಗಿ ತಗುಲಿಹಾಕಿಕೊಳ್ಳುತ್ತಿದ್ದವೊ? ಅದೆಷ್ಟು ಪಾತಾಳೇಶ್ವರ ದೇಗುಲಗಳು ನಿರ್ಮಾಣಗೊಂಡು ಪೂಜಾರಿಗಳ ಅನ್ನಕ್ಕೆ ದಾರಿ

ಮಾಡಿಕೊಡುತ್ತಿದ್ದವೊ? ಅದೆಷ್ಟು ಜನರ ಪ್ರೀತಿಯ ಸಂಕೇತಗಳು (ಎಕ್ಸ್ ಲವ್ಸ್ ವಾಯ್, ಐ ಲವ್ ಯು ಇತ್ಯಾದಿ) ಈ ಸುಂದರ ಸೃಷ್ಟಿಯ ನಿರ್ಮಾಣಗಳ ಮೇಲೆ ಕೆತ್ತಲ್ಪಡುತ್ತಿದ್ದವೊ? ಕೊನೆಗೆ ಎಷ್ಟು ಜನ ಸ್ಮಗ್ಲರುಗಳಿಗೆ ಜೀವನ ಕ್ರಮದ ಮಾರ್ಗವಾಗುತ್ತಿದ್ದವೊ? ಹೇಳಲು ಬಾರದು.

ಇಲ್ಲಿ ಉದ್ಭವ ಲಿಂಗಗಳನ್ನು ಹೋಲುವ ಹಲವಾರು ಸ್ಫಟಿಕ ಶುಭ್ರ ಮಿನೆರಲ್ ಕ್ರಿಯೇಷನ್ಸ್ ಇವೆ.

ಮೀನುಗಳನ್ನು ಒಣಗಿ ಹಾಕಿರುವ ಹಾಗೆ ಕಾಣುವ,
ತತ್ತಿಯನ್ನು ಒಡೆದು ಇಟ್ಟಂತೆ ಕಾಣುವ,
ಬಟ್ಟೆಯನ್ನು ಒಣಗಿ ಹಾಕಿದಂತೆ ಕಾಣುವ,
ಗಿಡದ ಬೇರುಗಳನ್ನು ಹೋಲುವ.......
ಹೀಗೆ ಇನ್ನೂ ಏನೇನೋ ನಮ್ಮ ಕಲ್ಪನೆಗೆ ಸವಾಲೆಸೆಯುವ ನಿರ್ಮಾಣಗಳು ಇಲ್ಲಿವೆ.

ಇಲ್ಲಿನ ಚಿಕ್ಕ ಚಿಕ್ಕ ಕ್ರಿಸ್ಟಲ್ ಕ್ಲಿಯರ್ ಕೊಳಗಳು ಎಷ್ಟು ಚೆನ್ನಾಗಿವೆ ಎಂದರೆ ಅವುಗಳನ್ನು ನೋಡಲು ಎರಡು ಕಣ್ಣುಗಳು ಸಾಲದೇನೋ ಎಂದೆನಿಸುತ್ತದೆ. ಕನ್ನಡದ ವರನಟ ಡಾ॥ರಾಜಕುಮಾರ್ ಏನಾದ್ರು ಈ ಕಾವೆರನ್ಸುಗಳನ್ನು ನೋಡಿದ್ದರೆ "ಜೀವನದಾಗ ಹುಟ್ಟಿದಮ್ಯಾಲ ಏನೇನು ಕಂಡಿ ಒಮ್ಮೆಯಾದ್ರೂ ನೋಡಬೇಕು ಲುರೆ ಕಯಾವರನ್ಸ್ ಗುಂಡಿ" ಅಂತ ಹಾಡುತ್ತಿದ್ದರೋ ಏನೊ!! ಮಾರ್ಗದುದ್ದಕ್ಕೂ ಆ ಅಮೆರಿಕನ್ ಸುಂದರಿ ತನ್ನ ಗೈಡ್ ಕೆಲಸವನ್ನು ಅದೆಷ್ಟು ಶ್ರದ್ಧೆಯಿಂದ ಮಾಡುತ್ತಿದ್ದಳೆಂದರೆ ನಾವೆಲ್ಲ ಕಿಂದರಿಜೋಗಿಯನ್ನು ಹಿಂಬಾಲಿಸಿದ ಇಲಿಗಳಂತೆ ಅವಳನ್ನು ಅನುಸರಿಸುತ್ತಿದ್ದೆವು.

ಇಲ್ಲೊಂದು ಚಿಕ್ಕ ಮಾನಸ ಸರೋವರವಿದೆ. ಅಂದರೆ ಒಂದು ಚಿಕ್ಕ ಕೊಳದಲ್ಲಿ ನಾವು ನಮಗೆ ಬೇಕೆನಿಸಿದ್ದನ್ನು ಬೇಡಿಕೊಂಡು ಕಾಯಿನ್ ಎಸೆದರೆ ನಮ್ಮ ಬೇಡಿಕೆ ಈಡೇರುತ್ತದೆ ಎನ್ನುವ ಪ್ರತೀತಿಯಿದೆ. ಇಲ್ಲಿ ಈ ರೀತಿ ಸಂಗ್ರಹವಾಗುವ ಹಣವನ್ನು ವೈದ್ಯಕೀಯ ಸಂಶೋಧನೆ, ನ್ಯಾಚುರಲ್ ಕೆಲಮಿಟಿ ರಿಲೀಫ್ ಫಂಡ್ ಇತ್ಯಾದಿ ಸಾಮಾಜಿಕ ಹಿತದ ಕಾರ್ಯಗಳಿಗೆ ದಾನ ನೀಡುತ್ತಾರೆ. ಇಲ್ಲಿ ಒಂದು ವರ್ಷದಲ್ಲಿ ಸಂಗ್ರಹವಾಗುವ ಹಣ ಸರಿ ಸುಮಾರು 20 ಸಾವಿರ ಡಾಲರುಗಳು!!

ಇಲ್ಲಿನ ಇನ್ನೊಂದು ವಿಶೇಷವೇನೆಂದರೆ ಜಗತ್ತಿನ ಒನ್ ಅಂಡ್ ಓನ್ಲಿ ಒನ್ ಸ್ಟಲಕಪೈಪ್ ಆರ್ಗನ್ ಇಲ್ಲಿದೆ. ಇದರಿಂದ ಹೊರಡುವ ಸಂಗೀತವನ್ನು ಸಹ ನಾವು ಕೇಳಿ ಮೆಚ್ಚಿದೆವು. ಈ ಸ್ಥಳದಲ್ಲಿ ಅಮೆರಿಕನ್ನರು ಮದುವೆಯಂತ ಸಮಾರಂಭಗಳನ್ನು ನಡೆಸುತ್ತಾರಂತೆ. "ತಾರಾ ಬಲಂತು ದೇವ ಚಂದ್ರ ಬಲಂತು ದೇವ" ಅಂತ ಹೇಳಲು ಅರ್ಜಿ ಹಾಕಿಕೊಳ್ಳಲು ಅಡ್ಡಿ ಇಲ್ಲ ತಾನೆ?

ಒಂದು ಗಂಟೆಯ ಈ ಅದ್ಭುತ ಲೋಕ ಸಂದರ್ಶಿದ ನಾವು ಹೊರಗೆ ಬಂದಾಗ ನಾವು ಯವುದೋ ಕಿನ್ನರ ಲೋಕದ ದರ್ಶನ ಮಾಡಿಕೊಂಡು ಕನಸಿನಿಂದ ವಾಸ್ತವಕ್ಕೆ ಬಂದ ಅನುಭವ ನಮಗಾಗಿತ್ತು. ಅಲ್ಲಿಯೆ ಇರುವ ಕಾರ್ ಮ್ಯುಸಿಯಮ್ ಒಂದನ್ನು ನೋಡಿದೆವು. ಇಲ್ಲಿ ಕಾರ್ ಹುಟ್ಟಿ ಬೆಳೆದು ಬಂದ ವಿವಿಧ ಮಾದರಿಗಳನ್ನು ಇಟ್ಟಿದ್ದಾರೆ. ಮುಂದೆ ನಮ್ಮ ಕಾರ್ಯಕ್ರಮ "ಅನ್ನದಾನೇಶ್ವರ ಪ್ರಸಾದ ನಿಲಯ" ಕ್ಕೆ ಭೇಟಿ ಅಂದರೆ ನಾವು ಕಟ್ಟಿಕೊಂಡು ಬಂದಿದ್ದ ಉಪ್ಪಿಟ್ಟು, ಶಿರ, ಪೂರಿ, ಆಲೂ ಪಲ್ಯ ತಿನ್ನುವದಾಗಿತ್ತು. ಮುಂದಿನದು ಮನೆಯ ಕಡೆಗೆ ಪ್ರಯಾಣ.

ಇಂಥ ಅದ್ಭುತ ನಿಸರ್ಗದ ನಿರ್ಮಿತಿಯನ್ನು ನಮಗೆಲ್ಲ ತೋರಿಸಿದ ಮಿತ್ರ ಗುಡಿ ಮತ್ತು ಗಲಗಲಿ ಇವರಿಗೆ ನಾನು ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಕಡಿಮೆಯೇ.

ನಾನು ಚಿಕ್ಯಾಗೋಗೆ ಹೊರಡುವ 6.57ರ ಫ್ಲೈಟ್ ಹಿಡಿಯಬೇಕಾಗಿದ್ದರಿಂದ ಗುಡಿಯ ಮನೆಗೆ ಬಂದು ಬೇಗನೆ ತಯಾರಾಗಿ ನನ್ನ ಲಗೇಜ್ ಸಮೇತ ಹೊರಟೆ. ಎಲ್ಲರಿಂದ ಆತ್ಮೀಯ ಬೀಳ್ಕೊಡುಗೆಯ ಆ ಕ್ಷಣಗಳು ಹೃದಯ ಸ್ಪರ್ಶಿಯಾಗಿದ್ದವು. ನನ್ನನ್ನು ಏರ್‌ಪೋರ್ಟ್‌ನವರೆಗೆ ಬಂದು ಗಲಗಲಿ ದಂಪತಿಗಳು ತಮ್ಮ ಕಾರಿನಲ್ಲಿ ಬೀಳ್ಕೊಟ್ಟರು. ನನ್ನ ಈ ವರದಿಯ ಬಗ್ಗೆ ನಿಮಗೇನು ಅನ್ನಿಸಿತು ಅನ್ನೊದನ್ನ ಖಂಡಿತ ನೀವೆಲ್ಲ ಬರೆಯುತ್ತೀರಿ ಎನ್ನುವ ನಂಬಿಕೆಯಿಂದ ಈ ಪತ್ರ ಇಲ್ಲಿಗೆ ಮುಗಿಸುವೆ.

ಬೈ,
ಪ್ರಕಾಶ

## ತನುವು ನಿನ್ನದು ಮನವು ನಿನ್ನದು

ಕವಿ : ಕುವೆಂಪು

ತನುವು ನಿನ್ನದು ಮನವು ನಿನ್ನದು
ನನ್ನ ಜೀವನ ಧನವು ನಿನ್ನದು
ನಾನು ನಿನ್ನವನೆಂಬ ಹೆಮ್ಮೆಯ
ತೃಣವು ಮಾತ್ರವೆ ನನ್ನದು ॥

ನೀನು ಹೊಳೆದರೆ ನಾನು ಹೊಳೆವೆನು
ನೀನು ಬೆಳೆದರೆ ನಾನು ಬೆಳೆವೆನು
ನನ್ನ ಹರಣದ ಹರಣ ನೀನು
ನನ್ನ ಮರಣದ ಮರಣವೂ, ನನ್ನ ಮರಣದ ಮರಣವೂ ॥
॥ತನುವು ನಿನ್ನದು ಮನವು ನಿನ್ನದು॥

ನನ್ನ ಮನದಲಿ ನೀನೆ ಉಕ್ತಿ
ನನ್ನ ಹೃದಯದಿ ನೀನೆ ಭಕ್ತಿ
ನೀನೆ ಮಾಯ ಮೋಹ ಶಕ್ತಿಯು
ನನ್ನ ಜೀವನ ಮುಕ್ತಿಯು, ನನ್ನ ಜೀವನ ಮುಕ್ತಿಯು ॥
॥ತನುವು ನಿನ್ನದು ಮನವು ನಿನ್ನದು॥

– ಈ ಭಾವಗೀತೆ ನಮ್ಮ **ಗುಂಡಣ್ಣನ (ಶ್ರೀನಿವಾಸ ಗುಡಿ)** ಮೆಚ್ಚಿನ ಗೀತೆಗಳಲ್ಲಿ ಒಂದು.
ಅದನ್ನು ಅವನ ಭಾವ ತುಂಬಿದ ಧ್ವನಿಯಲ್ಲಿ ಕೇಳುವದೇ ಒಂದು ಅಪೂರ್ವ ಅನುಭವ.

# ನನ್ನವನು

– ಶುಭಶ್ರೀ ಬೆಳಂದೂರ

ದೇವರ ಗುಡಿಯ ನಂದಾದೀಪದಂತೆ
ನನ್ನೆದೆಯ ಮಂದಿರದಿ ಪ್ರೇಮ ಜ್ಯೋತಿಯ ಬೆಳಗಿದವನು

ಬಾಳೆಂಬ ಪಥದಲ್ಲಿ ಮದುವೆಯ ರಥವೇರಿಸಿ
ಸಂಗಾತಿಯ ಸಾರಥ್ಯವ ನನಸಾಗಿಸಿದವನು

ಪ್ರೇಮ ದೀಕ್ಷೆಯ ಕೊಡಿಸಿ ಪ್ರೀತಿ ಭಿಕ್ಷೆಯ ನೀಡಿ
ಪ್ರಣಯ ಕಾವಿಯ ತೊಡಿಸಿ ಸಂಸಾರ ಸಾಗರವ ದಾಟಿಸುವವನು

ನನ್ನ ಪ್ರೇಮಾಮೃತದ ಕಡಲಲ್ಲಿ ಈಜಾಡಿ
ನಿನ್ನ ಪ್ರೇಮದಾಳವ ನಾನರಿಯೆ ಎಂದುಸಿರಿದವನು

ನನ್ನ ಪಾಕ ಪ್ರಾವೀಣ್ಯತೆಯ ಸವಿಯನ್ನು ಸಹಿಸಿ
ತನ್ನುದರದ ಹಸಿವನ್ನು ತಣಿಸಿಕೊಂಡವನು

ತಾಯ್ತನದ ಸಿರಿಯನ್ನು ಅನುಭವಿಸಿ ನೋಡೆಂದು
ಮುದ್ದಾದ ಮಗುವನ್ನು ಮಡಿಲಿಗಿಟ್ಟವನು

ಬಿಂಕ ಬಿಗುಮಾನವಿಲ್ಲದ ದುಃಖ ದುಮ್ಮಾನಗಳಿಲ್ಲದ
ನಿರ್ಮಲ ಮನದ ಪುರುಷೋತ್ತಮನಿವನು

ದಾಂಪತ್ಯದ ಸವಿಗನಸಿನ ಸಾಕಾರನಿವನು
ನನ್ನವನು ನನ್ನ ಮನದುಂಬಿದವನು

## ನಿಮ್ಮ ಮಕ್ಕಳಿಗಾಗಿ ಶ್ಲೋಕಗಳು.

ಸಂಗ್ರಹ : ಅರುಣ ಆರ್. ಯಾದವಾಡ.

**ಗುರು ಬ್ರಹ್ಮ**

ಗುರುರ್ ಬ್ರಹ್ಮ ಗುರುರ್ ವಿಷ್ಣು
ಗುರುರ್ ದೇವೊ ಮಹೇಶ್ವರ
ಗುರುರ್ ಸಾಕ್ಶಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೆ ನಮಃ

**ಗಾಯತ್ರಿ ಮಹಾ ಮಂತ್ರ**

ಓಂ ಭೂ ರ್ಭುವಸ್ಸುವಃ
ತತ್ಸ ವಿತುರ್ವರೇಣ್ಯಂ ।
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋನಃ ಪ್ರಚೋದಯಾತ್ ॥

**ಓಂ ಸಹನಾ ಭವತು**

ಓಂ ಸಹನಾ ಭವತು, ಸಹನೌ ಭುನಕ್ತು
ಸಹವೀರ್ಯಂಕರವಾವ ಹೀ
ತೇಜಸ್ವಿ ನಾವ ಧೀತ ಮಸ್ತು ಮಾ ವಿದ್ವಿಶಾ ವಹೈ
ಓಂ ಶಾಂತಿ ಶಾಂತಿ ಶಾಂತಿ ಹೀ ॥

**ಓಂ ತ್ರ್ಯಯಂಬಕಂ ಯಜಾಮಹೇ**

ಓಂ ತ್ರ್ಯಯಂಬಕಂ ಯಜಾಮಹೇ
ಸುಘಂಧಿಂ ಪುಷ್ಟಿ ವರ್ಧನಂ
ಪೂರ್ವಾತ್ ರುಕಮೇವ ವಂದನಾತ್
ಮೃತ್ಯೋರ್ ಮೂಕ್ಷಿಯಮೋಮೃತಾತ್

**ಯಾ ಕುಂದೆಂದು**

ಯಾ ಕುಂದೆಂದು ತುಷಾರಹಾರ ಧವಳಾ
ಯಾ ಶುಭ್ರ ವಸ್ತ್ರಾನ್ವಿತಾ
ಯಾ ವೀಣಾ ವರದಂದ ಮಂದಿತಾಕಾರ
ಯಾ ಶ್ವೇತ ಪದ್ಮಾಸನಾ
ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿಃಬಿಃ
ದೇವೈ ಸದಾ ಪೂಜಿತ
ಸಾ ಮಾಂ ಪಟ್ಟು ಸರವತೀ ಭಗವತೀ
ನಿಶ್ಯೇಷ ಜಾಡ್ಯಾಪಃ

**ಮೂಷಿಕ ವಾಹನ**

ಮೂಷಿಕ ವಾಹನ ಮೋದಕ ಹಸ್ತಾ
ಚಾಮರ ಕರ್ಣ ವಿಲಂಬಿತ ಸೂತ್ರ
ವಾಮನ ರೂಪ ಮಹೇಶ್ವರ ಪುತ್ರ
ವಿಘ್ನ ವಿನಾಯಕ ಪಾದ ನಮಸ್ತೆ

**ಅನ್ನಪೂರ್ಣೆಶ್ವರಿ ಮಂತ್ರ**

ಅನ್ನಪೂರ್ಣೆ ಸದಾಪೂರ್ಣೆ ಶಂಕರ ಪ್ರಾನವಲ್ಲಭೆ
ಜ್ನಾನ ವೈರಾಗ್ಯ ಸಿದ್ಯರ್ಥಂ, ಭಿಕ್ಷಾಂದೇಹೀಚ ಪಾರ್ವತಿ ।
ಮಾತಾಚ ಪಾರ್ವತಿದೇವಿ, ಪಿತದೇವೋ ಮಹೇಶ್ವರಃ
ಭಾಂದವಾ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಂ ॥

**ಮಹಾ ಮೃತ್ಯುಂಜಯ ಮಂತ್ರ**

ಓಂ ತ್ರ್ಯಂಬಕಂ ಯಜಾಮಹೇ,
ಸುಗಂಧಿಂ, ಪುಷ್ಟಿ ವರ್ಧನಂ ।
ಉರ್ವಾರುಕಮೇವ ಬಂಧನಾತ್
ಮೃತ್ಯೋರ್ಮುಕ್ಷೀಯ ಮಾಮೃತಾತ್ ।

**ಅಪವಿತ್ರ ಪವಿತ್ರೋವಾ**

ಅಪವಿತ್ರ ಪವಿತ್ರೋವಾ
ಸರ್ವಾವಸ್ಥಾ ಗತೋವಿವಾ
ಯಸ್ಮರೇತ್ ಪುಂಡರೀಕಾಕ್ಷಂ
ಸೌಭ್ಯಂತರಸ-ಶುಚಿ ॥

**ಗಜಾನನಂ ಭೂತ ಗಣಾದಿ ಸೇವಿತಂ**

ಗಜಾನನಂ ಭೂತ ಗಣಾದಿ ಸೇವಿತಂ
ಕಪಿತ್ಥ ಜಂಬೂ ಫಲಸಾರ ಭಕ್ಷಿತಂ
ಉಮಾ ಸುತಂ ಶೋಕ ವಿನಾಶಕ ಕಾರಣಂ
ನಮಾಮಿ ವಿಘ್ನೇಶ್ವರ ಪಾದ ಪಂಕಜಂ

## ಟಿಪಿಬಳಗಕ್ಕೆ ಫ್ರೆಂಡಶಿಪ್ಪಾ..?

ಬೆಂಗಳೂರು dialogues exclusively for ಟಿಪಿಬಳಗ by ಅರುಣ ಯಾದವಾಡ.

1. ಟಿಪಿಬಳಗಕ್ಕೇ ಫ್ರೆಂಡಶಿಪ್ಪಾ..?
2. ಗುಡಿಗೇ Delayನಾ..?
3. ಬಿಳಗಿಗೇ confuse aa..?
4. ರಾಜಗೋಳಿಗೇ article aa..?
5. ಯಾದ್ಯಾಗೇ keep in touchchaa..?
6. ಆನ್ಯಾಗೇ comedy naa..?
7. ಸದ್ದಾಮಂಗೇ argument aa..?
8. ಗುರುಗೇ Determinataionnaa..?
9. ವಾಲ್ಯಾಗೇ patriotism aa..?
10. ತಾಹೀರ್‌ಗೇ ಕಾಲೆಳೆಯೋದಾ..?
11. ಪಾಯಿಂಟನಿಗೇ communication gap aa..?
12. ಆನಂದನಿಗೇ art aa..?
13. ಪುಂಡ್ಯಾಗೇ **<u>ಜೋ</u>ಕಾ...**?
14. ಗೌಡ್ರಿಗೇ ಬಾಂಡ್‌ಗಿರಿನಾ..?
15. ಬಸುಗೇ ಟೌಂಟಾ..?
16. ಸ್ವಾಮಿಗೇ ಕನ್ನಡಾಭಿಮಾನಾನಾ..?

**ಹಚ್ಚೇವು ಕನ್ನಡದ ದೀಪ –**

ಕವಿ: ಡಾ|| ಡಿ.ಎಸ್. ಕರ್ಕಿ

ಹಚ್ಚೇವು ಕನ್ನಡದ ದೀಪ
ಕರುನಾಡ ದೀಪ ಸಿರಿಮುಡಿಯ ದೀಪ
ಒಲವೆತ್ತಿ ತೋರುವ ದೀಪ

ಬಹುದಿನಗಳಿಂದ ಮೈಮರೆವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು
ಅಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ ಗಡಿನಾಡೆ ಇರಲಿ
ಕನ್ನಡದ ಕಳೆಯು ಕೆಚ್ಚೇವು
ಮರೆತೇವು ಮರವ ತೆರೆದೇವು ಮನವ
ಎರೆದೇವು ಒಲವ ಹಿರಿನೆನಪಾ
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ

ಕಲ್ಪನೆಯ ಕಣ್ಣು ಹರಿವಾಣಕ ಸಾಲು
ದೀಪಗಳ ಬೆಳಕ ಬೀರೆವು
ಹಚ್ಚಿರುವ ದೀಪದಲಿ ತಾಯ ರೂಪ
ಅಚ್ಚಳಿಯದಂತೆ ತೋರೆವು
ಒಡಲೊಳಲ ಕೆಚ್ಚಿನ ಕಿಡಿಗಳನ್ನು
ಗಡಿನಾಡಿನಾಚೆ ತೂರೆವು
ಹಮ್ಮಿರಲು ಪ್ರೀತಿ ಎಲ್ಲಿಹುದು ಭೀತಿ
ನಾಡೊಲವೆ ನೀತಿ ಹಿಡಿನೆನಪ
ಮನೆಮನೆಗಳಲ್ಲಿ ಮನಮನಗಳಲ್ಲಿ
ಹಚ್ಚೇವು ಕನ್ನಡದ ದೀಪ

ನಮ್ಮವರು ಗಳಿಸಿದ ಹೆಸರುಳಿಸಲು
ಎಲ್ಲಾರು ಒಂದು ಗೂಡೆವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೆವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯ ಗೀತ ಹಾಡೆವು
ತೊರೆದೇವು ಮರುಳ ಕಡೆದೇವು ಇರುಳ
ಪಡೆದೇವು ತಿರುಳ ಹಿರಿನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮೂಡಿಸಿ
ಹಚ್ಚೇವು ಕನ್ನಡದ ದೀಪ

# ನಮ್ಮ ಡಚ್ ಕ್ಲೈಂಟ್ ಇಂಡಿಯನ್ ರಿಕ್ಷಾ ಹತ್ತಿದ ಪ್ರಸಂಗ

– ಬಸವರಾಜ ಯಾದವಾಡ

ಈ ಒಂದು ಸ್ವಾರಸ್ಯಕರ ಅನುಭವವನ್ನು ನಿಮ್ಮೆಲ್ಲರೊಂದಿಗೆ ಹಂಚಿಕೊಳ್ಳಲು ನನಗ ಭಾಳ ಖುಷಿ ಆಗಾಕತ್ತೈತಿ. ಇಂಥಾ ಪ್ರಸಂಗ ನಿಮಗ ಹಿಂದೆಂದೂ ಬಂದಿರ್ಲಿಕ್ಕಿಲ್ಲ ಅಥವಾ ಮುಂದೆನೂ ಬರಲಿಕ್ಕಿಲ್ಲಾ.

ಅದು ಏನ ಆತಪಾ ಅಂದ್ರ ಈಗ ಒಂದು ಮೂರು ವರ್ಷದ ಹಿಂದೆ ನಾನು ಯುನಿಟಿ ಬಿಲ್ಡಿಂಗ್‌ನಲ್ಲಿರುವ ಒಂದು ಸಾಫ್ಟವೇರ್ ಕಂಪನಿಯಲ್ಲಿ ಕೆಲಸಾ ಮಾಡ್ತಾ ಇದ್ದೆ. ಒಂದಿನಾ ನಮ್ಮ ಕಂಪನಿಗೆ ಒಬ್ಬಾ ಡಚ್ ಮನಿಷಾ (ಕ್ಲೈಂಟ್) ಬಂದಾ. ಮತ್ತ ಪ್ಲಾನ್ ಪ್ರಕಾರ ಅಂವಾ ನಮ್ಮ ಅಫ್ಹೀಸಿಗೆ ಮಧ್ಯಾಹ್ನ 2.30ಕ್ಕ ಬರಬೇಕಾಗಿತ್ತು. ಅಷ್ಟರಾಗ ನಮ್ಮ ಕಂಪನಿ ಮ್ಯಾನೇಜಿಂಗ್ ಡೈರೆಕ್ಟರನ ಮೀಟಿಂಗ್ ಯಾಸ್ ಯುಜ್ವಲ್ ಭಾಳ ಲೇಟ ಆಗಿ ಮುಗಿತು. (ಈ ನಮ್ಮ ಮ್ಯಾನೇಜಿಂಗ್ ಡೈರೆಕ್ಟರನ ಮೀಟಿಂಗ್ ಬಗ್ಗೆ ಸವಿಸ್ತಾರವಾಗಿ ಇನ್ನೊಮ್ಮೆ ಬರೀತೆನಿ). ಅವರ ಈ ಮೀಟಿಂಗ್ ಅಟೆಂಡ ಆಗಿದ್ದ ಎಲ್ಲಾ ಮಾರ್ಕೆಟಿಂಗ್ ಮತ್ತು ಬಿಸಿನೆಸ್ಸ್ ಕನ್ಸಲ್ಟಂಟ್ಸ್ ಒಳ್ಳೆ ಹುಲಿ ಬೋನ್ ಒಳಗಿಂದ ಜೀವಂತ ಹೊರಗ ಬಂದ ಆಡಿನ ಮರಿ ಥರಾ ಬಡಾ ಬಡಾ ಊಟಕ್ಕ ಓಡಿ ಹೋಗಾಕ್ಕ ನಿಂತ್ರು. ಅದರಾಗ ರಾಕೇಶ ಜೋಶಿ ಅನ್ನೋ ನಾರ್ತ್ ಇಂಡಿಯನ್ ಮಹಾಶಯ, ಕಾಮ ಚೋರ್ ಮನಿಶ್ಯಾ ಈ ಕ್ಲೈಂಟ್‌ನ್ನ ನಮ್ಮ ಅಫ್ಹೀಸಿಗೆ ಕರಕೊಂಡು ಬರೋ ಜವಾಬ್ದಾರಿ ತಗೊಂಡಿದ್ದಾ.

ಅಂವಾ ನನ್ನ ಹಂತೇಕ ಬಂದು ಬಸವರಾಜ್ "ಅಭಿ ಮೇರಾ ಲಂಚ್ ಕೇ ಲಿಯೆ ಥೋಡಾ ಲೇಟ್ ಹೋ ರಹಾ ಹೈ, ತುಮ್ ಜಾಕೆ ಉಸ್ಕೊ ಹೊಟೇಲ್ಸೆ ಆಫ್ಹೀಸ್ ಲೇಕೆ ಆನಾ, ಉಸ್ಕೆ ಬಾದ್ ಮೇರಾ ವೊಹ್ ಕ್ಲೈಂಟ್ ಕೆ ಸಾತ್ ಮೀಟಿಂಗ್ ಹೈ" ಅಂದಾ. ನಾನು ಅವಂಗ ಹೇಳಿದೆ ನಾನು ಟೆಕ್ನಿಕಲ್ ಪರ್ಸನ್‌ಪಾ ನನಗ ಇವೆಲಾ ಗೊತ್ತ ಇಲ್ಲ ಅಂತಾ. ಅಂವಾ ಮಾತ್ರಾ ಬಿಡಲೇ ಇಲ್ಲ ಹೆಂಗೊ ಮಾಡಿ ಈ ಕೆಲ್ಸಾನ ನನ್ನ ಮ್ಯಾಲ ಹಾಕೇ ಬಿಟ್ಟಾ. ನನಗೂ ಈ ಕ್ಲೈಂಟ್ ಇಂಟ್ರ್ಯಾಕ್ಶನ್ ಏನೂ ಮೊದಲನೇ ಸಲಾ ಅಲ್ಲಾ (ಇ–ಮೇಲೂ/ಚಾಟು/ಫ್ಹೋನ್‌ನ್ಯಾಗ ಇಂಟ್‌ರ್ಯಾಕ್ಟ್ ಮಾಡಿದ್ದೆ) ಆದರ ಕ್ಲೈಂಟ್‌ನ ಜೋಡಿ ಇದು ಮೊದಲನೇ ಸಲಾ ನನ್ನ ಮುಖಾಮುಖಿ..!. ನಾ ಅಂದೆ "ಆಯಿತು ನಾ ಹೊಕ್ಕೇನಿ ಆದರ ಗಾಡಿ ವ್ಯವಸ್ಥಾ ಹೆಂಗಪಾ ಮತ್ತಾ..?" ಅಂವಾ ಭಾಳ ಚಾಲೂ ಇದ್ದ ನೋಡ್ರಿ, "ತುಮ್ ಆಟೋ ಲೇಕೆ ಜಾನಾ ಔರ್ ಬಿಲ್ ಕಂಪನಿಸೆ ರಿ–ಇಂಬರ್ಸ್ ಕರದೇನಾ" ಅಂತ ಹೇಳಿ ಕೈ ತೊಳಕೊಂಡು ಬಿಟ್ಟಾ. ನಾನು ನಮ್ಮ ಎಂ.ಡಿ ಸಾಹೇಬಾ ತನ್ನ ಒಬೇರಾಯನ ಕಾಲದ ಇಂಪೋರ್ಟೆಡ್ ಟೋಯೋಟಾ ಕಾರರೆ ಕೊಡತಾನು ಅಂತ ಆಸೆ ಬಿಟಗೊಂಡು ನೋಡಿದೆ. ಆದರ ಏನೂ ಉಪಯೋಗಾ ಆಗಲಿಲ್ಲರಿ. ನಾನು ಅನಿವಾರ್ಯ ಇಲ್ಲದ ನಮ್ಮ ಆಫ್ಹೀಸಿನಿಂದಾ ಆಟೋ ಹಿಡ್ಕೊಂಡು ಹೋಟೇಲ್ ಹೈ ಗೇಟ್ಸ್ ಚರ್ಚ್ ಸ್ಟ್ರೀಟ್ ಹುಡಕೊಂಡು ಹೊಂಟೆ. ನಾ ಹೋಟೇಲ್ ಮುಟ್ಟಿದಾಗ ಡಚ್ ಕ್ಲೈಂಟ್ (ಬಹುಶಃ ಅವನ ಹೆಸರು ಕ್ಯಾನ್‌ಬೆ ಇರಬೇಕು ಅಂತ ಅನಸ್ತೈತಿ) ರೂಂನ್ಯಾಗ ಇರಲಿಲ್ಲ. ರಿಸೆಪ್ಶ್ಯಾನ್ಯಾಗ ಅಂವಾ ಅರ್ಧಾ ತಾಸು ಬಿಟ್ಟ ಬರತಾನು ಅಂದ್ರು. ನಾ ಅವ್ನಿಗೆ ಒಂದು ಮೆಸ್ಸೆಜ್ ಇಟ್ಟು ಚರ್ಚ್ ಸ್ಟ್ರೀಟು ಮತ್ತಾ ಬ್ರಿಗೇಡ್ ರೋಡ್ ಅಡ್ಡಾಡಿ ಬಂದೆ. ರಿಸೆಪ್ಶನ್ಯಾಗ ಅಂವಾ ಬಂದಿದ್ದ ನನ್ನ ಸಲುವಾಗಿ ಕಾದು ಮತ್ತ ಎಲ್ಲೋ ಹ್ವಾದ ಅಂದ್ರು.. ಹಿಂಗಾ 2 ಸಲಾ ಆದ ಮ್ಯಾಗ ನಾ ಕಡಿಕೂ ಅಂವಾ ರಿಸೆಪ್ಶ್ಯನಾಗ ವಿಜಿಟರ್ಸ್ ಸೋಫ್ಹಾದ ಮ್ಯಾಲ ಕುಂತಾಗ ಅವನ ಆಕೃತಿ, ವೇಷಾ ನೋಡಿ, ನನ್ನ ಹೆಸರು, ಕಂಪನಿ ಹೆಸರು ಹೇಳಿ ಗುರ್ತಾ ಮಾಡಕೊಂಡೆ. ಅಂವಾ ಮೊದಲ ಎಲ್ಲಾ ಸೂಟ್ ಕೇಸ್ ಹಿಡ್ಕೊಂಡ ರೆಡಿ ಆಗೇ ಕುಂತಿದ್ದಾ. ನಾನು ಕರದ ಕೂಡ್ಲೆ ನನ್ನ ಕೂಡ ಹೊಂಟ ನಿಂತಾ.

ಈ ಹೈ ಗೇಟ್ಸ್ ಹೊಟೇಲ್ ಮುಂದಾ ಒಬ್ಬಾವಾ ಹೈ–ಫೈ ಕಾಯಿ–ಪಲ್ಲೆ ಮಾರಾವಾ ಅಗ್ದೀ ಸಿಸ್ಟೀಮ್ಯಾಟಿಕ್ ಆಗಿ ಪ್ಲಾಸ್ಟಿಕ್ ಚೀಲದಾಗ ಬೀನ್ಸ್ ಪ್ಯಾಕ್ ಮಾಡಿ ಮಾರಾಕ ಇಟ್ಟಿದ್ದಾ. ಅದರಾಗ ಅಂವಾ ಒಂದ ಪಾಕೀಟ್ ಎತಗೊಂಡು ನನಗ ತೋರಿಸಿ "ಸೀ ಇಫ್ಹ್ ಯು ಈಟ್ ದಿಸ್, ಯು ವಿಲ್ ನೆವರ್ ಹ್ಯಾವ್ ಡಯಾಬಿಟಿಸ್ ಇನ್ ಯುವರ್ ಲೈಫ್ಹ್" ಅಂದಾ. (ಓದುಗರು ಆತನ ಮಾತುಗಳನ್ನು ಅಮೇರಿಕನ್ ಉಚ್ಚಾರದೊಂದಿಗೆ ಊಹಿಸಿಕೊಳ್ಳಬೇಕಾಗಿ ವಿನಂತಿ ☺). ನನಗರ ಒಳಗೊಳಗ ಇವಂಗ

ನಡೀಪಾ ಆಟೋದಾಗ ಹತ್ತು ಅಂತ ಹ್ಯಾಂಗ ಹೇಳಬೇಕಂತ ಎಂಬರಾಸ್ಸಮೆಂಟ್ ಅಗಾಕತ್ತಿತ್ತು. ಅಂವಾ ನನ್ನ ಹಿಂದಿಂದಾ ನನ್ನ ಫ಼ಾಲೋ ಮಾಡಕೊಂಡು ಆಟೋ ಸ್ಟ್ಯಾಂಡಿನತನಕ ಬಂದಾ. ನಾ ಆಟೋದವಂಗ ಯುನಿಟಿ ಬಿಲ್ಡಿಂಗ್ ನಡೀಪಾ ಅಂತ ಹೇಳಿ ನಮ್ಮ ಕಂಪನಿಯವರನ್ನ ಬೈಕೊಂತಾ (ನನಗ ಇಂಥಾ ಎಂಬ್ಯಾರೆಸ್ಸಿಂಗ್ ಪರಿಸ್ಥಿತಿ ತಂದಿದ್ದಕ್ಕ) ಈ ನಮ್ಮ ಕ್ಲೈಂಟ್ ನ ಕೂಡ ಆಟೋ ಹತ್ತಿದೆ. ಇಲ್ಲಿಂದಾ ಶುರು ಆಯಿತು ನೋಡ್ರಿ ಆಕ್ಚ್ಯುಅಲ್ ಸ್ಟೋರಿ..!

"ದಿಸ್ ಇಸ್ ಕಾಲ್ಡ್ ರಿಕ್ಷಾ ನೋ?" ಅಂತ ಅಂವಾ ಅಮೇರಿಕನ್ ಸ್ಟೈಲ್‌ನ್ಯಾಗ ಕೇಳಿದಾಗ ನಾನು ಭೂಲೋಕಕ್ಕ ವಾಪಸು ಬಂದಿದ್ದೆ. ನಾ ಒಮ್ಮೆಲೆ ಹಿಂದಾ ಮುಂದಾ ನೋಡದ ಯಸ್ ಯಸ್ ಅಂದೆ. ಯಾಕಂದ್ರ ನಮ್ಮೂರಾಗ ರಿಕ್ಷಾ ಅಂದ್ರ ನಡೀತಿತ್ತು ಬೆಂಗಳೂರಾಗ ರಿಕ್ಷಾ ಅಂದ್ರ ಯಾರಿಗೂ ಗೊತ್ತಗೂದಿಲ್ಲ. ಬೆಂಗಳೂರಿಗೇ ಗೊತ್ತಿಲ್ಲದ ರಿಕ್ಷಾಅನ್ನೋ ವರ್ಡು ಇವಂಗ ಹ್ಯಾಂಗ ಗೊತ್ತಾತು ಅಂತ ಆಶ್ಚರ್ಯಾನೂ ಷಾಕೂ ಎಲ್ಲಾ ಏಕ ಕಾಲಕ್ಕೇ ಆತು. ನಾ ಆ ಷಾಕಿನಿಂದಾ ಹೊರಗ ಬರುದ್ರಾಗ ಅಂವಾ "ಐ ಲೈಕ್ ದಿಸ್ ರಿಕ್ಷಾ.. ದಿಸ್ ಇಸ್ ದ ಮೋಸ್ಟ್ ಎರ್-ಕಂಡಿಶನ್ಡ್ ವೆಹಿಕಲ್ ಐ ಹ್ಯಾವ್ ಎವರ್ ಸೀನ್" ಅಂದಾ..! ನಾನು ಸಧ್ಯಕ್ಕ ಊಳಕೊಂಡೆಪಾ ದೇವರ ನನ್ನ ಕಂಪನಿಯವರು ನನಗ 2-ವೀಲರ್ ಮ್ಯಾಲ ಈ ಕ್ಲೈಂಟ್ ನ್ನು ಕರಕೊಂಡು ಬಾ ಅನಲಿಲ್ಲ ಅಂತ ಮನಸ್ಸಿನ್ಯಾಗ ಅನಕೊಂಡೆ. ನಾ ಹಿಂಗಾ ವಿಚಾರಾ ಮಾಡಕೊಂತ ಕುಂತಾಗ ಈ ಮನಿಷಾ ನಮ್ಮ ಬೆಂಗಳೂರಾಗಿನ 2-ವೀಲರ್+3-ವೀಲರ್‌ಗಳನ್ನ ನೋಡಿ ಭಾರಿ ಇನ್‌ಸ್ಪೈರ್ ಆದಾಂಗ ಕಾಣಿಸ್ತು.. ಅಂವ ಹಂಗಾ ಪ್ರಶ್ನೆ ಮ್ಯಾಲ ಪ್ರಶ್ನೆ ಕೇಳಕೊಂತಾ ಹೋದಾ.. ನಾ ಹಂಗ ಲೈಟ್ ಆಗಿ ಏನೇನೋ ರೀಲು ಬಿಟ್ಟೆ... "ಆಲ್ ದೀಸ್ ರಿಕ್ಷಾಸ್ ಆಂಡ್ ಬೈಕ್ಸ್ ಆರ್ ಮ್ಯಾನುಫ್ಯಾಕ್ಚರ್ಡ್ ಇನ್ ಇಂಡಿಯಾ ರೈಟ್?" "ಹೂ ಇಸ್ ದ ಮ್ಯಾನುಫ್ಯಾಕ್ಚರರ್?" "ವ್ಹಾಟ್ ಇಸ್ ದ ಕಾಸ್ಟ್ ಆಫ್ ಎ ರಿಕ್ಷಾ? (ಏನೊ ವಿಮಾನದಾಗ್ ಹಿಂದಿನಾ ಡಿಕ್ಕಿ ಒಳಗ ತಮ್ಮೂರಿಗೆ ಒಂದು ರಿಕ್ಷಾ ತಗೊಂಡು ಹೊಗೋರಗತ್ಲೆ). ನನಗ ಅವನ ಆಟೋಮೊಬೈಲ್ ಪ್ರಶ್ನಾವಳಿ ಕೇಳಿ ಕೇಳಿ ಸಾಕಾಗಿ ಹೋತು.. ಅಷ್ಟರಾಗ ಏನಾತಪಾ ಅಂದ್ರ ನಮ್ಮ ಆಟೋ ಡ್ರೈವರ್ ಕಸ್ತೂರ್‌ಬಾ ರೋಡ್ ಮಲ್ಲ್ಯಾ ಹಾಸ್ಪಿಟಲ್ ಜಂಕ್ಶನ್ ಹಂತೇಕ ಸಿಗ್ನಲ್ ಕ್ರಾಸ್ ಮಾಡಿಬಿಟ್ಟಿದ್ದ. ..! ಅಷ್ಟರಾಗ ಒಮ್ಮೆ ರೆಡ್ ಲೈಟ್ ಬಿದ್ದಿದ್ದ ನೋಡಿ, ಸಡನ್ ಆಗಿ ಬ್ರೇಕ್ ಹಾಕಿಬಿಟ್ಟಾ. ನಂದು ಮತ್ತ ಈ ಕ್ಯಾನ್‌ಬೆದೂ ಇಬ್ಬರ್ದೂ ತಲಿಗೋಳು ಸ್ವಲ್ಪರಾಗ ಆ ಡ್ರೈವರನ ಬೆನ್ನಿಗೆ ಗುದ್ದುದನ್ನ ತಪ್ಪಿಸಿಕೊಂಡಿವಿ. ನಾವಿಬ್ರೂ ಕುಂತಿದ್ದ ಸೀಟೂ ದಪ್ಪಂತ ಕೆಳಗ ಬಿತ್ತು (ಆಟೋ ಒಳಗನ..!). ನಾನು ಮತ್ತ ಆ ಕ್ಲೈಂಟ್ ಇಬ್ಬರೂ ಕೂಡಿ ಎದ್ದು ನಿಂತು ಆ ಸೀಟನ್ನ ಎತ್ತಿ ಇಟ್ಟು ಮತ್ತ ಅದರ ಮ್ಯಾಲ ಕುಂತ್ವಿ. ಅಬ್ಬಾ!! ಅಂತು ಇಂತು ಅದು-ಇದು ಮಾತಾಡುದರಾಗ ನಮ್ಮ ಆಫೀಸು (ಯುನಿಟಿ ಬಿಲ್ಡಿಂಗ್‌ನಲ್ಲಿದ್ದುದು-ಇದು ಸಿ.ಏಸ್.ಐ ನವರಿಗೆ ಸೇರಿದ್ದು) ಬಂದ ಬಿಡ್ತು..

ಆಟೋದಿಂದಾ ಇಳದಕೂಡ್ಲೆ ಅಂವಾ ಅಲ್ಲಿ ಗ್ವಾಡಿ ಮ್ಯಾಲಿರೋ ಪ್ಲಸ್ ಸಿಂಬಲ್ ನೋಡಿ ಮತ್ತಷ್ಟ ಎಕ್ಸೈಟ್ ಆಗಿ ಅದರ ಕೆಳಗ ಇರೋ ಆಮೇನ್ ಗೀಮೇನ್ ಅನ್ನೋ ಪ್ರೇಯರ್ ಓದಕೊಂತಾ ನಿಂತಬಿಟ್ಟಾ..ಅಷ್ಟರಾಗ ನಾನು ಆಟೊದವನ ಬಿಲ್ ಕೊಟ್ಟು ಅವನ ಕರಕೊಂಡು ಸೀದಾ ನಮ್ಮ ಎಂ.ಡಿ ರೂಂ ಹಂತೇಕ ಬಿಟ್ಟು ಬರೊದರಾಗ ಇಲ್ಲಿಂದಾ ತಪ್ಪಿಸಿಕೊಂಡ್ರ ಸಾಕಪಾ ಅಂತ ಓಡಿ ಬಂದ್ ಬಿಟ್ಟೆ_

ಹಿಂಗಿತ್ ನೋಡ್ರಿ ನಮ್ಮ ಡಚ್ ಕ್ಲೈಂಟ್‌ನ ನಾನು ಆಟೋ ಹತ್ತಿಸಿದ ಮುಖಾಮುಖಿ ಪ್ರಸಂಗಾ..!

ನಿಮಗ ಹ್ಯಾಂಗ್ ಅನಿಸಿತು ತಿಳಿಸ್ರಿ,,,!

## ನಿಮ್ಮ ಮನೆಗೊಂದು ಮುದ್ದಾದ ಹೆಸರು..

– ಅರುಣ. ಯಾದವಾಡ.



ಅಭ್ಯುದಯ
ಅಚಿಂತ್ಯ
ಆದರ
ಐಸಿರಿ
ಅಕ್ಷಯ
ಅಂಬರ
ಅಮೃತ
ಅನಘ
ಅನೀಶ
ಅನುಗ್ರಹ
ಅನುಪಮ
ಅಪ್ಪ–ಅಮ್ಮ
ಅಪೂರ್ವ
ಅರ್ಘ್ಯ
ಆಶೀರ್ವಾದ
ಬಾನು
ಭಾವನಾ
ಭಾವ
ಭೂಷಣ
ಚೈತ್ರ
ಚಂದನ
ಧರಣಿ
ಧರಿತ್ರಿ
ದಿಗಂತ
ದಿನಕರ
ದಿವ್ಯ
ಗಗನ
ಗಮಕ
ಗ್ರೀಷ್ಮ

ಹೇಮ
ಹೇಮಂತ
ಹೊಂಗಿರಣ
ಹೊನ್ನು
ಇಂಚರ
ಇಂಪು
ಕಾನನ
ಕಲರವ
ಕಲ್ಪವೃಕ್ಷ
ಕಾಂಚನ
ಕಾಮಧೇನು
ಕಂಪು
ಕನಕ
ಕಾವ್ಯ
ಕೃತಜ್ಞ
ಕ್ಷೇಮ
ಕ್ಷಿತಿಜ
ಕುಸುಮ
ಲಾವಣ್ಯ
ಲಾಸ್ಯ
ಮಧುರ
ಮಲ್ಲಿಗೆ
ಮಂದಹಾಸ
ಮನು
ಮುಂಜಾವು
ನಭ
ನಗೆಹೊನಲು
ನೈದಿಲೆ
ನಲಿವು

ನಲುಮೆ
ನವ್ಯ
ನೆಲೆ
ನೇಸರ
ನಿರಂತರ
ನೂತನ
ಓಘ
ಓಜಸ್ಸು
ಒಲುಮೆ
ಓಂ
ಪಾವನ
ಪ್ರಜ್ವಲ
ಪ್ರಪುಲ್ಲ
ಪೃಥ್ವಿ
ರಾಗ
ರಜತ
ಸಂಭ್ರಮ
ಸಂಪದ
ಸಂಪಿಗೆ
ಸಮೃದ್ಧಿ
ಸಂತಸ
ಶಕ್ತಿ
ಶರದ
ಶಿಶಿರ
ಶಿವ
ಶ್ರೀ
ಶೃಂಗ
ಶೃತಿ
ಶುಭ

ಸಿದ್ಧಿ
ಸ್ನೇಹ
ಸೊಗಸು
ಸೌಜನ್ಯ
ಸೌಖ್ಯ
ಸೌಮ್ಯ
ಸುಮ
ಸುನೀತ
ತೇಜಸ್ವಿ
ತುಂತುರು
ಉನ್ನತಿ
ವರ್ಷ
ವಸಂತ
ವಸುಂಧರೆ
ವಿಹಾರ
ವಿಕಾಸ
ವಿನ್ಯಾಸ

** ರಾಮದುರ್ಗದಲ್ಲಿರುವ ತಾಹೀರ್ ಸನದಿ ಅವರ ಮನೆಯ ಹೆಸರು – "ಸರಿತಾ"
ಇದರ ವಿಶೇಷ ಏನೆಂದರೆ ಈ ಹೆಸರು ಸ–ಸಬೀನಾ , ರಿ–ರಿಜ್‌ವಾನಾ, ತಾ–ತಾಹೀರ್ ಮೂರು ಹೆಸರುಗಳನ್ನು ಕೂಡಿದೆ.

## ಕೃತಜ್ಞತೆಗಳು:

- ಈ ಸಂಚಿಕೆಯನ್ನು ಹೊರತರುವಲ್ಲಿ ಎಲ್ಲಾ ರೀತಿ ಸಲಹೆ ಸೂಚನೆಗಳನ್ನು ನೀಡಿದ, ಪ್ರೋತ್ಸಾಹಿಸಿದ ನಮ್ಮ ಟಿಪಿಬಳಗದ ಎಲ್ಲ ಸ್ನೇಹಿತರಿಗೆ
- ಈ ಸಂಚಿಕೆಗೆ ವಿಶೇಷವಾಗಿ ತಮ್ಮ ರಚನೆಗಳನ್ನು ಕಳಿಸಿದ ಶ್ರೀ. ದೇಶಪಾಂಡೆ ಸುಬ್ಬರಾಯರು ಹಾಗೂ ಶ್ರೀಮತಿ. ಶುಭಶ್ರೀ ಬೆಳಂದೂರ ಅವರಿಗೆ
- ಈ ಸಂಚಿಕೆಯನ್ನು ಓದಿ , ಆನಂದಿಸಿ ತಮ್ಮ ಮುಕ್ತ ಅಭಿಪ್ರಾಯ ತಿಳಿಸಲಿರುವ ನಮ್ಮ ಎಲ್ಲ ಸ್ನೇಹಿತ ವೃಂದಕ್ಕೆ

**ಅಂತರ್ಜಾಲದಲ್ಲಿ ನಮ್ಮ ವಿಳಾಸ:**

**http://groups.yahoo.com/group/tpbalaga/**

- **ನಿಮ್ಮ ಅಭಿಪ್ರಾಯ, ಅನಿಸಿಕೆ, ಟೀಕೆ, ಟಿಪ್ಪಣಿಗಳನ್ನು ದಯವಿಟ್ಟು ಈ ಕೆಳಕಂಡ ಈ-ಮೇಲ್ ವಿಳಾಸಕ್ಕೆ ಕಳುಹಿಸಿ.**

  **tejarun@yahoo.com**